# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 • ಸಂಚಿಕೆ:233 • ನೋಂದಣಿ ನಂ.:KARKAN27911 • ವಿಜಯನಗರ • 09.02.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:233 • Reg.No:KARKAN27911 • VIJAYANAGARA • 09.02.2024 • Friday • Page:04 • Rs:2






- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.


# ದೇಶದ ಬಲವರ್ಧನೆಗಾಗಿ ಬಿಜೆಪಿ ಬೆಂಬಲಿಸೋಣ

## ಮಂಡಲ ನೂತನ ಅಧ್ಯಕ್ಷ ಬೆಣಕಲ್ ಪ್ರಕಾಶ್ ಹೇಳಿಕೆ | ಗ್ರಾಮ ಚಲೋ ಅಭಿಯಾನಕ್ಕೆ ಚಾಲನೆ | ಮೋದಿಜಿ ಮತ್ತೊಮ್ಮೆ ದೇಶದ ಪ್ರಧಾನಿಯಾಗಲಿ





**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ದೇಶದ ಬಲವರ್ಧನೆಗಾಗಿ ಬಿಜೆಪಿಯನ್ನು ಗ್ರಾಮ ಹಾಗೂ ಬೂತ್‌ಮಟ್ಟದಿಂದ ಸಂಘಟಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಪ್ರಧಾನಿ ಮೋದಿಜಿಯವರನ್ನು ಮತ್ತೊಂದು ಅವಧಿಗೆ ಪ್ರಧಾನಿಯಾಗಿಸುವ ನಿಟ್ಟಿನಲ್ಲಿ ಎಲ್ಲಾ ಕಾರ್ಯಕರ್ತರ ಕಂಕಣಬದ್ಧರಾಗಿ ಕಾರ್ಯನಿರ್ವಹಿಸೋಣ ಎಂದು ಭಾರತೀಯ ಜನತಾ ಪಕ್ಷದ ಮಂಡಲ ನೂನತ ಅಧ್ಯಕ್ಷ ಬೆಣಕಲ್ ಪ್ರಕಾಶ್ ಹೇಳಿದರು.

ಪಟ್ಟಣದ ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಬಿಜೆಪಿಯಿಂದ ಹಮ್ಮಿಕೊಳ್ಳಲಾಗಿದ್ದ ಅಧ್ಯಕ್ಷ ಪದಗ್ರಹಣ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಹಾಗೂ ನಿಕಟಪೂರ್ವ ಅಧ್ಯಕ್ಷ ವೀರೇಶ್ವರ ಸ್ವಾಮಿಯವರಿಂದ ಬಿಜೆಪಿ ಧ್ವಜ ಸ್ವೀಕರಿಸಿ, ಗ್ರಾಮ ಚಲೋ ಅಭಿಯಾನಕ್ಕೂ ಚಾಲನೆ ನೀಡಿ ಮಾತನಾಡಿದರು. ಬಿಜೆಪಿಯಲ್ಲಿ ಈವರೆಗೂ ನಾನು ಸಾಮಾನ್ಯ ಸದಸ್ಯನಾಗಿ ಕಾರ್ಯನಿರ್ವಹಿಸಿದ್ದೇನೆ. ಸೇವೆಯನ್ನು ಗುರುತಿಸಿದ ಪಕ್ಷ ತಾ.ಪಂ.ಅಭ್ಯರ್ಥಿಯಾಗಿ ಅವಕಾಶ ನೀಡಿ ಬೆಂಬಲಿಸಿದ್ದರಿಂದ ತಾ.ಪಂ.ಸದಸ್ಯನಾಗಿ, ಬಳಿಕ ಪಕ್ಷದ ತಾಲೂಕು ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದೇನೆ. ಪಕ್ಷದಲ್ಲಿ ಸಾಮಾನ್ಯರಿಗೂ ಅವಕಾಶ ಕೂಡಿಬರುತ್ತೆ ಎನ್ನುವುದಕ್ಕೆ ನಾನೇ ಸಾಕ್ಷಿ. ಎಲ್ಲರ ಸಲಹೆ, ಸಹಕಾರದೊಂದಿಗೆ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಉತ್ತಮ ಸಂಘಟನೆ, ಪಕ್ಷ ನೀಡಿದ ಜವಬ್ದಾರಿಯನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ನಿಕಟ ಪೂರ್ವ ಅಧ್ಯಕ್ಷ ವೀರೇಶ್ವರ ಮಾತನಾಡಿ, ಮುಂಬರಲಿರುವ ಲೋಕಸಭಾ ಚುನಾವಣೆ ಅದು ಸಂಕಲ್ಪದ, ಸವಾಲಿನ ಮತ್ತು ದೇಶದ ಚುನಾವಣೆಯಾಗಿದ್ದು, ಈ ಚುನಾವಣೆಯ ಗುರಿಯು ನರೇಂದ್ರ ಮೋದಿಯವರು ಮತ್ತೊಮ್ಮೆ ದೇಶದ ಪ್ರಧಾನ ಮಂತ್ರಿಯಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಬಿಜೆಪಿ ವಿಭಾಗ ಮಟ್ಟದ ಸಂಘಟನ ಪ್ರಧಾನ ಕಾರ್ಯದರ್ಶಿ ಪೂಜಪ್ಪ, ಜಿಲ್ಲಾ ಉಪಾಧ್ಯಕ್ಷ ಭದ್ರವಾಡಿ ಚಂದ್ರಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಲ್ಲಾಹುಣಸಿ ರಾಮಣ್ಣ, ಮಹಾಲಕ್ಷ್ಮಿ ಕಂದೂರಿ ಮಾತನಾಡಿ, ಗ್ರಾಮದಲ್ಲಿ ಕಾರ್ಯಕ್ರಮ ಹಾಕಿಕೊಳ್ಳುವ ಮೂಲಕ, ಕೇಂದ್ರ ಸರ್ಕಾರದ ಅನೇಕ ಜನಪರ ಯೋಜನೆಗಳ ಸಮರ್ಪಕರ ಅನುಷ್ಠಾನಕ್ಕೆ ಜನ ಜಾಗೃತಿ ಮೂಡಿಸಬೇಕಾಗಿದೆ. ಮನವರಿಕೆ ಮಾಡಿಕೊಡಲು ಸನ್ನದ್ಧರಾಗೋಣ ಎಂದರು.

ಮಂಡಲ ಮಾಜಿ ಅಧ್ಯಕ್ಷ ನೆರೆಗಲ್ ಕೊಟ್ರೇಶ್, ಕೊಟ್ಟೂರಿನ ನಗರ ಘಟಕದ ಅಧ್ಯಕ್ಷ ಭರಮನಗೌಡ, ರಾಘವೇಂದ್ರ ಶೆಟ್ರು, ನೇತಾಜಿಗೌಡ್ರು, ಮಾಲವಿ ಮಲ್ಲಿಕಾರ್ಜುನ, ಮಲ್ಲಿಕಾರ್ಜುನ ನಾಯ್ಕ್ ತಾಲೂಕಿನ ಗ್ರಾಮೀಣ ಪ್ರದೇಶದಿಂದ ಬಂದ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು. ಪುರಸಭೆ ಸದಸ್ಯ ಜೋಗಿ ಹನುಮಂತ ಕಾರ್ಯಕ್ರಮ ನಿರ್ವಹಿಸಿದರು.

## ಮೈಕ್ರೋ ನ್ಯೂಸ್

### ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ: ವಿದ್ಯಾರ್ಥಿನಿ ಶೇಕ್ ಸನಾ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಮಾತಾ ಪದವಿ ಕಾಲೇಜಿನ ವಿದ್ಯಾರ್ಥಿನಿ ಷೇಕ್ ಸನಾ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಬಿಸಿಎ ಪದವಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಯಾಂಕವನ್ನು ಗಳಿಸಿದ್ದಾರೆ.

ಶ್ರೀ ಮಾತಾ ಪದವಿ ಕಾಲೇಜಿಗೆ ಹಾಗೂ ಹೊಸಪೇಟೆಯ ನಗರಕ್ಕೆ ಹೆಸರುಗಳಿಸಿದ ಶೇಕ್ ಸನಾ ವಿದ್ಯಾರ್ಥಿನಿಯನ್ನು ವಿಜಯನಗರ ಜಿಲ್ಲಾಧಿಕಾರಿ ದಿವಾಕರ್ ಎಂ ಎಸ್ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತಾ ಪದವಿ ಕಾಲೇಜಿನ ಪ್ರಾಚಾರ್ಯ ಸಾಗರ್ ಕೋದಂಡಪಾಣಿ, ಕಾಂಡ್ರಾ ಸತೀಶ್ ಹಾಗೂ ಉಪನ್ಯಾಸಕ ಜಾಫರ್ ಉಪಸ್ಥಿತರಿದ್ದರು. ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ವಿದ್ಯಾಧರ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ನಾಗರಾಜ್ ಹವಾಲ್ದಾರ್ ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ಕಂಪ್ಯೂಟರ್ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಕಂಪ್ಯೂಟರ್ ತಂತ್ರಜ್ಞಾನಿ ಆಗುವ ಆಶಯವನ್ನು ಶೇಕ್ ಸನಾ ವ್ಯಕ್ತಪಡಿಸಿದರು.

### ಗ್ರಾಮ-1 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಕೆಲವು ಗ್ರಾಮ ಪಂಚಾಯತ್‌ಗಳಲ್ಲಿನ ಗ್ರಾಮ–1 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಆಸಕ್ತ ವಿದ್ಯಾವಂತ ನಿರುದ್ಯೋಗಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಗ್ರಾಮ–1 ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲೆಯ 8 ಗ್ರಾಮ ಪಂಚಾಯತ್‌ಗಳಲ್ಲಿ ಮರು ಅಧಿಸೂಚನೆಯನ್ನು ಸರ್ಕಾರವು ಹೊರಡಿಸಿದೆ. ಗಂಗಾವತಿ ತಾಲ್ಲೂಕಿನ ವಡ್ಡರಹಟ್ಟಿ, ಕಾರಟಗಿ ತಾಲ್ಲೂಕಿನ ಬೆನ್ನೂರ, ಬೇವಿನಹಳ್ಳಿ ಹಾಗೂ ಸಿದ್ದಾಪುರ, ಕೊಪ್ಪಳ ತಾಲ್ಲೂಕಿನ ಗಿಣಿಗೇರಾ, ಕುಕನೂರು ತಾಲ್ಲೂಕಿನ ಇಟಗಿ, ಕುಷ್ಟಗಿ ತಾಲ್ಲೂಕಿನ ಕಿಲ್ಲಾರಹಟ್ಟಿ ಗ್ರಾಮ ಪಂಚಾಯತ್‌ಗಳಲ್ಲಿ ತಲಾ ಒಂದು ಮತ್ತು ಕನಕಗಿರಿಯ ತಾಲ್ಲೂಕಿನ ಹಿರೇಖೇಡ ಗ್ರಾ.ಪಂ.ನಲ್ಲಿ 2 ಕೇಂದ್ರಗಳು ಸೇರಿದಂತೆ ಜಿಲ್ಲೆಯ ಒಟ್ಟು 9 ಗ್ರಾಮ–1 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಆಯಾ ಗ್ರಾ.ಪಂ ವಿದ್ಯಾವಂತ ನಿರುದ್ಯೋಗಿಗಳು ಫೆಬ್ರವರಿ 15ರೊಳಗಾಗಿ ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

# ಕೊಟ್ಟೂರೇಶ್ವರ ಮಹಾವಿದ್ಯಾಲಯಕ್ಕೆ 3 ರ‍್ಯಾಂಕ್







**ಹಂಪಿ ಟೈಮ್ಸ್ ಕೊಟ್ಟೂರು**

ಬಳ್ಳಾರಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ನಡೆಸಿದ 2022–23ನೇ ಶೈಕ್ಷಣಿಕ ವರ್ಷದ ಬಿ.ಎಸ್ಸಿ .ಪದವಿ ಪರೀಕ್ಷೆಯ ಫಲಿತಾಂಶದಲ್ಲಿ ಕೊಟ್ಟೂರಿನ ಕೊಟ್ಟೂರೇಶ್ವರ ಮಹಾವಿದ್ಯಾಲಯ ಮೂರು ರ‍್ಯಾಂಕ್‌ಗಳನ್ನು ಮುಡಿಗೇರಿಸಿಕೊಂಡಿದೆ.

ಕೊಟ್ಟೂರೇಶ್ವರ ಮಹಾವಿದ್ಯಾಲದ ವಿದ್ಯಾರ್ಥಿಗಳು ದೀಪ.ಕೆ. 93.94 ಅಂಕ ಗಳಿಸಿ ವಿಶ್ವವಿದ್ಯಾಲಯಕ್ಕೆ ದ್ವಿತೀಯ ರ‍್ಯಾಂಕ್ ಪಡೆದಿದ್ದು, ಸಾಧನ ಎನ್.ಎಸ್. 93.60 ಅಂಕಗಳಿಸಿ ತೃತಿಯ ರ‍್ಯಾಂಕ್ ಮತ್ತು ಕ್ಷಮ. ಪಿ. 92.62 ಅಂಕ ಪಡೆದು ಐದನೇ ರ‍್ಯಾಂಕ್ ಗಳಿಸುವ ಮೂಲಕ ಮೂವರು ವಿಧ್ಯಾರ್ಥಿಗಳು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

ಕಾಲೇಜ್ ಆಡಳಿತ ಮಂಡಳಿಯ ಅಧ್ಯಕ್ಷರು ಸಿದ್ದರಾಮ ಕಲ್ಮಠ 1968 ರಿಂದ ಸತತವಾಗಿ ಬಿ.ಎ, ಬಿ.ಎಸ್ಸಿ, ಮತ್ತು ಬಿ.ಕಾಂ. ಪದವಿಯಲ್ಲಿ ಕೊಟ್ಟೂರೇಶ್ವರ ಮಹಾವಿದ್ಯಾಲಯ ವಿದ್ಯಾರ್ಥಿಗಳು ರಾಂಕ್ ಪಡೆದು ಕಾಲೇಜನ್ನು ಅಗ್ರಸ್ಥಾನಕ್ಕೇರಿಸಿದ್ದಾರೆ. ವಿದ್ಯಾರ್ಥಿಗಳ ಮತ್ತು ಉಪನ್ಯಾಸಕರ ಪರಿಶ್ರಮ ಸಾರ್ಥಕವೆನಿಸಿದ ಹೆಮ್ಮೆ ನಮಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾಲೇಜಿನ ಪ್ರಾಂಶುಪಾಲರು ಡಾ.ಎಂ .ರವಿಕುಮಾರ್ ವಿದ್ಯಾರ್ಥಿಗಳ ಸಾಧನೆಗೆ ನೆರವಾದ ಎಲ್ಲಾ ಅಧ್ಯಾಪಕರಿಗೂ, ಮತ್ತು ವಿದ್ಯಾರ್ಥಿಗಳಿಗೂ ಹಾಗೂ ಸಹಕರಿಸಿದ ಪೋಷಕರಿಗೆ, ಆಡಳಿತ ಮಂಡಳಿಯ ಸದಸ್ಯರು, ಬೋಧಕ ಬೋಧಕೇತರ ಸಿಬ್ಬಂದಿ ವರ್ಗ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸಿಹಿ ತಿನಿಸಿ ಹರ್ಷ ಹರ್ಷವ್ಯಕ್ತಪಡಿಸಿದರು.

# ಸಿಎಂ ಜನತಾ ದರ್ಶನದಲ್ಲಿ ವಿಸಿ ಮೂಲಕ ಜಿಲ್ಲಾಧಿಕಾರಿ, ಜಿಪಂ ಸಿಇಓ, ಅಧಿಕಾರಿಗಳು ಭಾಗಿ

**ಹಂಪಿ ಟೈಮ್ಸ್ ಹೊಸಪೇಟೆ**



ಮುಖ್ಯಮಂತ್ರಿಗಳ ಮಹತ್ವದ ಜನತಾ ದರ್ಶನ ಕಾರ್ಯಕ್ರಮವು ಬೆಂಗಳೂರಿನಲ್ಲಿ ಗುರುವಾರ ಆರಂಭವಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನೇರವಾಗಿ ಭೇಟಿ ಮಾಡಿ ಅಹವಾಲು ಸಲ್ಲಿಸುವ ಮಹತ್ವದ ಈ ಜನತಾ ದರ್ಶನ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಪಂ ಸಿಇಓ ಸೇರಿದಂತೆ ಜಿಲ್ಲಾ, ತಾಲೂಕು ಮಟ್ಟದ ಎಲ್ಲ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು. ನಗರದ ವಿಜಯನಗರ ಜಿಲ್ಲಾಡಳಿತ ಭವನದಲ್ಲಿನ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಹಾಗೂ ಜಿಪಂ ಸಿಇಓ ಸದಾಶಿವ ಪ್ರಭು ಬಿ ಅವರು ಜನತಾ ದರ್ಶನ ಕಾರ್ಯಕ್ರಮದಲ್ಲಿ ಭಾಗಿಯಾಗಿದರು. ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಮಹದ್ ಅಲಿ ಅಕ್ರಮ ಷಾಹ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ವೀಡಿಯೋ ಮೂಲಕ ಜನತಾ ದರ್ಶನ ವೀಕ್ಷಿಸಿ, ಸೂಚನೆಗಳನ್ನು ಪಡೆದರು.




# ಪ್ರಸ್ತಾವನೆ ಎಂಬ ಸಂವಿಂಧಾನದ ಆತ್ಮ

ಭಾರತೀಯ ಸಂವಿಧಾನದ ಪ್ರಸ್ತಾವನೆಯನ್ನು 'ಸಂವಿಧಾನದ ಆತ್ಮ' ಮತ್ತು ಬೆನ್ನೆಲುಬು ಎಂದು ಪರಿಗಣಿಸಲಾಗಿದೆ. ಭಾರತದ ಸಂವಿಧಾನ ಮತ್ತು ಪ್ರಸ್ತಾವನೆಯ ಮಹತ್ವವನ್ನು ಸಾಮಾನ್ಯರಿಗೂ ತಿಳಿಯಪಡಿಸಲು ಕರ್ನಾಟಕ ಸರ್ಕಾರ ತಿಂಗಳವರೆಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಸಂವಿಧಾನದ ಆದರ್ಶಗಳು, ಮೌಲ್ಯಗಳು ಮತ್ತು ಆಶೋತ್ತರಗಳ ಕುರಿತು ಅರಿವು ಮೂಡಿಸುವುದು ಜಾಗೃತಿ ಜಾಥಾದ ಉದ್ದೇಶವಾಗಿದೆ.

22ನೇ ಜನವರಿ 1947 ಸಂವಿಧಾನ ಸಭೆಯಲ್ಲಿ ಅಂಗೀಕೃತವಾದ ಉದ್ದೇಶಗಳ ನಿರ್ಣಯವನ್ನು' ಮಂಡಿಸಿದ ಶ್ರೀ ಜವಾಹರಲಾಲ್ ನೆಹರು ರವರಿಗೆ ಪ್ರಸ್ತಾವನೆಯ ಬೆಳವಣಿಗೆಯ ಕೀರ್ತಿ ಸಲ್ಲುತ್ತದೆ. ಪ್ರಸ್ತಾವನೆ ಸಂವಿಧಾನ ಪ್ರವರ್ತಕರ ಮನಸ್ಸನ್ನು ತೆರೆದಿಡುವ 'ಕೀಲಿ ಕೈನಂತೆ' ಸಂವಿಧಾನದ ಪ್ರಸ್ತಾವನೆ ಭಾರತ ಜನತೆಯ ಆದರ್ಶಗಳು ಮತ್ತು ಆಶೋತ್ತರಗಳನ್ನು ಒಳಗೊಂಡಿದೆ. ಸಮಗ್ರ ಭಾರತದ ಸಮಾನತೆ, ನ್ಯಾಯ, ಸಹೋದರತೆಯ ಮೌಲ್ಯಗಳನ್ನು ಬಿಂಬಿಸುವುದರ ಜೊತೆ ಭಾರತದ ಸ್ವಾತಂತ್ರ್ಯದ ಐತಿಹಾಸಿಕ ಹೆಜ್ಜೆಗಳ ಪಯಣವನ್ನು ಸಂವಿಧಾನ ಸಾರುತ್ತದೆ.

ಪ್ರಸ್ತಾವನೆಯ ಪ್ರಾರಂಭದ ವಾಕ್ಯವಾದ, "ಭಾರತದ



THE CONSTITUTION OF INDIA

WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens:

JUSTICE, social economic and political;
LIBERTY of thought, expression, belief, faith and worship;
EQUALITY of status and of opportunity;
and to promote among them all
FRATERNITY assuring the dignity of the individual and the unity and intergrity of the Nation;

IN OUR CONSTITUENT ASSEMBLY this twenty-sixth day of November, 1949, do HEREBY ADOPT, ENACT AND GIVE TO OURSELVES THIS CONSTITUTION.

ಜನಗಳಾದ ನಾವು" ಭಾರತೀಯ ಜನಗಳೇ ಸಂವಿಧಾನದ ಮೂಲಾಧಾರವಾಗಿದ್ದು, ಒಕ್ಕೂಟ ವ್ಯವಸ್ಥೆಯು ಭಾರತೀಯರ ಸಾರ್ವಭೌಮತ್ವ, ಜನಸತಾತ್ಮಕ ಮನೋಭಾವನೆಯನ್ನು ಎತ್ತಿಹಿಡಿಯುತ್ತಿದೆ. ರಾಜಕೀಯ ಅಧಿಕಾರದ ಮೂಲ ಪ್ರಜೆಗಳೇ ಆಗಿದ್ದು, ಭಾರತದ ಸಾರ್ವಭೌಮ ಜನರಲ್ಲಿ ನಿಹಿತವಾಗಿದ್ದು, ಜನಗಳೇ ಪ್ರಭುಗಳೆಂಬ ಭಾವ ವ್ಯಕ್ತವಾಗಿದೆ.

ಸಂವಿಧಾನದ ಪ್ರಸ್ತಾವನೆಯು ಸಂವಿಧಾನವನ್ನು ಮತ್ತದರ ಆಶಯಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಪೂರಕವಾಗಿದೆ. ಸಂವಿಧಾನದ ಪ್ರಸ್ತಾವನೆಯು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಸರ್ವಧರ್ಮ ಸಮಭಾವಿಕ ಮತ್ತು ಜನಸತ್ತಾತ್ಮಕ ಗಣರಾಜ್ಯವೆಂದು ಘೋಷಿಸಿದೆ. ನ್ಯಾಯ, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವ ಸಂವಿಧಾನದ ಮೂಲ ಅಧಾರಸ್ಥಂಬಗಳಾಗಿವೆ.

ಸಮಾಜದ ಸಾಮಾನ್ಯ ಕಲ್ಯಾಣಕ್ಕೆ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಆಯಾಮಗಳನ್ನು ಒಳಗೊಂಡಿರುವ ನ್ಯಾಯಯುತ ಸಮಾಜವನ್ನು ರಚಿಸುವ ಬದ್ಧತೆಯನ್ನು ಸಂವಿಧಾನದ ಪ್ರಸ್ತಾವನೆಯು ಪ್ರತಿಬಿಂಬಿಸುತ್ತದೆ.

ಸಂವಿಧಾನದ ಪ್ರಸ್ತಾವನೆಯು ಸಂವಿಧಾನದ ಅರ್ಥೈಸುವಿಕೆ ಮತ್ತು ಹಲವಾರು ಕ್ಲಿಷ್ಟಕರ ಸಂವಿಧಾನಾತ್ಮಕ ನಿರ್ಣಯಗಳ ಸಂದರ್ಭದಲ್ಲಿ ಪ್ರಸ್ತಾವನೆಯ ಆಶಯಗಳಿಗೆ ಧಕ್ಕೆ ಬಾರದಂತೆ ಕ್ರಮವಹಿಸಿದೆ. ಸಂವಿಧಾನದ ಪ್ರಸ್ತಾವನೆಯನ್ನು ಮತ್ತದರಲ್ಲಿ ಒಳಗೊಂಡಿರುವ ಉದ್ದೇಶಗಳು ಸಂವಿಧಾನದ ಮೂಲಭೂತ ರಚನೆಯ ಅಂಶಗಳಾಗಿದ್ದು, ಸಂವಿಧಾನದ ಮಹತ್ವದ ಭಾಗವೆಂದು ಕೇಶವಾನಂದ ಭಾರತಿ ವಿರುದ್ಧ ಕೇರಳ ರಾಜ್ಯ ಸರ್ಕಾರ ಪ್ರಕರಣದಲ್ಲಿ ತಿಳಿಸಿದೆ. ಅದೇ ರೀತಿ ಮಿನರ್ವ ಮಿಲ್ಸ್ ಲಿಮಿಟೆಡ್,1980 ಕೇಸ್ ನಲ್ಲಿ ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕ ತತ್ವಗಳ ನಡುವೆ ಸಾಮರಸ್ಯ ಮತ್ತು ಸಮತೋಲನವು ಸಂವಿಧಾನದ ಸಾರ್ವಭೌಮತ್ವದ ಲಕ್ಷಣಗಳಾಗಿವೆ, ಸಂವಿಧಾನದ ಮೂಲ ರಚನೆಗೆ ಧಕ್ಕೆ ಬಾರದಂತೆ ಸಂವಿಧಾನ ಯಾವುದೇ ತಿದ್ದುಪಡಿ ಮಾಡಲಾಗುವುದೆಂದು ತೀರ್ಪು ನೀಡಿದೆ. ಭಾರತದ ಕೋಟ್ಯಾಂತರ ಜನರ ಆಶೋತ್ತರಗಳನ್ನು ಸಂವಿಧಾನ ರಚನಾಕಾರರ ದೂರದೃಷ್ಟಿಯನ್ನು ಬಿಂಬಿಸುವ ಪ್ರಸ್ತಾವನೆ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ. ಸಹೋದರತೆ, ಸಮಾನತೆಯನ್ನು ಕಾಪಾಡುವ ಅದ್ಭುತ ಅಸ್ತ್ರವಾಗಿದೆ. ಜನಸತ್ತಾತ್ಮಕ, ಸಾರ್ವಭೌಮ, ಸಮಾಜವಾದಿ, ರಾಷ್ಟ್ರದ ನಿರ್ಮಾಣದಲ್ಲಿ ಸಂವಿಧಾನದ ಪ್ರಸ್ತಾವನೆ ಸದಾ ದಾರಿ ದೀಪದಂತೆ ಬೆಳಕು ತೋರುತ್ತದೆ. ಎಲ್ಲರೂ ಸಂವಿಧಾನದ ಮೌಲ್ಯಗಳನ್ನು ಅರಿತು ಪಾಲಿಸೋಣ.

– ರಾಹುಲ್ ರತ್ನಂ ಪಾಂಡೇಯ್
ಸಿಇಒ ಜಿಪಂ ಕೊಪ್ಪಳ

## ವಚನ ಅರಿವು

### ಲಕ್ಷಣ

**ಕಂಥೆ ತೊಟ್ಟವ ಗುರುವಲ್ಲ, ಕಾವಿ ಹೊತ್ತವ ಜಂಗಮವಲ್ಲ, ಶೀಲ ಕಟ್ಟಿದವ ಶಿವಭಕ್ತನಲ್ಲ, ನೀರು ತೀರ್ಥವಲ್ಲ, ಕೂಳು ಪ್ರಸಾದವಲ್ಲ.**
**ಹೌದೆಂಬವನಬಾಯ ಮೇಲೆಅರ್ಥಮಣದಪಾದರಕ್ಷೆಯನ್ನು ತೆಗೆದುಕೊಂಡು**
**ಮಾಸಿ ಕಡಿಮೆಯಿಲ್ಲದೆ ತೂಗಿ ತೂಗಿ ಟೊಕಟೊಕನೆ**
**ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ.**

**– ಅಂಬಿಗರ ಚೌಡಯ್ಯ**

ನಿಜವಾದ ತತ್ವ, ಉಪದೇಶ ಮಾಡದೆ, ಶರಣತತ್ವಕ್ಕೆ ವಿರುದ್ಧವಾಗಿ ಬದುಕುವ ಮತ್ತು ತನ್ನ ಜೀವನಕ್ಕೆ ಜೋಳಿಗೆ ಹಾಕಿಕೊಂಡು ಬೇಡಿ ತಿನ್ನುವವನು ಗುರುವಲ್ಲ. ಶರಣರು ಹೇಳಿದ ರೀತಿಯಲ್ಲಿ ಸಾಧನೆ ಮಾಡದೆ ಜಂಗಮನೆಂದು ಹೇಳಿಕೊಂಡು ನಿಜ ಜಂಗಮನಾಗದೆ, ಕಾವಿ ಬಟ್ಟೆಗಳನ್ನು ಧರಿಸಿ ಮಾಡಬಾರದ ಕೆಲಸಗಳನ್ನು ಮಾಡುವವರು ನಿಜ ಜಂಗಮರಲ್ಲ. ಪ್ರಾಮಾಣಿಕವಾಗಿ ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡಬೇಕು. ಇಷ್ಟಲಿಂಗವನ್ನು ಆರಾಧಿಸಬೇಕು. ಪರದೈವವನ್ನು ನಂಬಬಾರದು. ಪರಧನಕ್ಕೆ ಆಸೆ ಮಾಡಬಾರದು. ಪರಸ್ತ್ರೀಯರನ್ನು ಬಯಸಬಾರದು. ಮನುಷ್ಯರೆಲ್ಲರನ್ನು ಗೌರವಿಸಿ, ಸಮಾನವಾಗಿ ಕಾಣಬೇಕು. ಸಕಲಜೀವಿಗಳಿಗೆ ಒಳ್ಳೆಯದನ್ನೆ ಬಯಸಬೇಕು. ಇವು ಗುರು, ಲಿಂಗ, ಜಂಗಮ, ಭಕ್ತರಿಗೆ ಶರಣರು ನಿಯಮಿಸಿದ ನಿರೂಪ. ಯಾವುದೇ ಹೊಳೆ ನೀರು ತೀರ್ಥವಾಗುವುದಿಲ್ಲ. ಉಣ್ಣುವ ಊಟವೆಲ್ಲವು ಪ್ರಸಾದವಾಗುವುದಿಲ್ಲ. ನಿಷ್ಠೆಯಿಂದ ಕಾಯಕವನ್ನು ಮಾಡಿ ಬಂದದ್ದರಲ್ಲಿ ಊಟ ಮಾಡಿದರೆ ಪ್ರಸಾದವಾಗುತ್ತದೆ. ದಾರಿ ತಪ್ಪಿದ ಗುರು, ಲಿಂಗ, ಜಂಗಮ, ಭಕ್ತ ಅಂತ ಹೇಳಿಕೊಂಡು ತಿರುಗುವ ಯಾರೇ ಆಗಲಿ, ಅವರನ್ನು ಒಪ್ಪಿಕೊಂಡರೆ, ಅವರಂತೆ ಬದುಕಲು ಪ್ರಯತ್ನಿಸಿದರೆ ಅರ್ಧಮಣದ ಕೆರಗಳನ್ನು ತೆಗೆದುಕೊಂಡು ಕೈಬೀಸಿ, ಕೈಬೀಸಿ ಟೊಕ ಟೊಕನೆ ಶಬ್ದ ಬರುವಂತೆ ಹೊಡೆದು ಬುದ್ಧಿಯ ಕಲಿಸಬೇಕು ಎಂದು ಕಠಿಣವಾಗಿ ಆಚಾರವಿಲ್ಲದವರನ್ನು ವಿರೋಧಿಸುತ್ತಾನೆ ಶರಣ ಅಂಬಿಗರ ಚೌಡಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮುಖ್ಯಮಂತ್ರಿಗಳ ಜನಸ್ಪಂದನ - 02 ಕಾರ್ಯಕ್ರಮದಲ್ಲಿ ಒಟ್ಟು 12372 ಅರ್ಜಿಗಳ ಸ್ವೀಕಾರ

**ಬೆಂಗಳೂರು:** ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಇಂದು ವಿಧಾನಸೌಧದಲ್ಲಿ ನಡೆಸಿದ ಜನಸ್ಪಂದನ ಕಾರ್ಯಕ್ರಮದಲ್ಲಿ ಒಟ್ಟು 12372 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಸ್ಥಳದಲ್ಲಿಯೇ 246 ಅರ್ಜಿಗಳು ಇತ್ಯರ್ಥವಾಗಿದ್ದು, 12126 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಕಂದಾಯ ಇಲಾಖೆಗೆ ಅತಿ ಹೆಚ್ಚು ಅರ್ಜಿಗಳು ಕಂದಾಯ ಇಲಾಖೆಗೆ ಅತಿ ಹೆಚ್ಚು ಅಂದರೆ 3150 ಅರ್ಜಿಗಳು ಸ್ವೀಕಾರವಾಗಿದ್ದರೆ, ಮುಖ್ಯ ಕಾರ್ಯದರ್ಶಿಗಳ ಕಚೇರಿಗೆ ಒಂದು ಅರ್ಜಿ ಸ್ವೀಕಾರವಾಗಿದೆ. ವಸತಿ ಇಲಾಖೆಗೆ 1500 ಅರ್ಜಿಗಳು ಸ್ವೀಕಾರವಾಗಿ ಎರಡನೇ ಸ್ಥಾನದಲ್ಲಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 903 ಅರ್ಜಿಗಳು ಸಲ್ಲಿಕೆಯಾಗಿವೆ.

ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಇಲಾಖೆ, ಮುಖ್ಯ ಕಾರ್ಯದರ್ಶಿಗಳ ಕಾರ್ಯಾಲಯ,ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ( ಇ– ಆಡಳಿತ) ಮುಖ್ಯಮಂತ್ರಿಗಳ ಕಾರ್ಯಾಲಯ, ಸಂಸದೀಯ ವ್ಯವಹಾರಗಳ ಇಲಾಖೆ ಈ ಐದು ಇಲಾಖೆಗಳಲ್ಲಿ ಯಾವುದೇ ಅರ್ಜಿ ಸ್ವೀಕೃತವಾಗಿಲ್ಲ. ಬಾಕಿ ಅರ್ಜಿಗಳನ್ನು ಒಂದು ತಿಂಗಳೊಳಗೆ ಇತ್ಯರ್ಥಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ತ್ಯಾಗವೀರ ಶಿರಸಂಗಿ ಲಿಂಗರಾಜ ಅರಸರು

ಇಂದು ಇಡೀ ಉತ್ತರ ಕರ್ನಾಟಕವು ಶೈಕ್ಷಣಿಕವಾಗಿ ಮುಂದುವರೆಯಲು ಕಾರಣವಾಗಿರುವ ಎರಡು ಶಕ್ತಿ ಕೇಂದ್ರಗಳಲ್ಲಿ ಲಿಂಗಾಯತ ಮಠಗಳು ಮುಂಚೂಣಿಯಲ್ಲಿದ್ದರೆ ಎರಡನೇ ಶಕ್ತಿ ಕೇಂದ್ರವಾಗಿ ಶಿರಸಂಗಿಯ ಲಿಂಗರಾಜ ಅರಸರು ನಿಲ್ಲುತ್ತಾರೆ ಎಂದರೆ ಅತಿಶಯೋಕ್ತಿ ಏನಲ್ಲ. ಉತ್ತರ ಕರ್ನಾಟಕದ ಕೆಎಲ್‌ಇ ಸೊಸೈಟಿ ಎಂದು ಕರೆಯಲ್ಪಡುವ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ ಮತ್ತು ಬಿ ಎಲ್ ಡಿ ಇ ಸಂಸ್ಥೆಗಳ ಹುಟ್ಟು ಮತ್ತು ಬೆಳವಣಿಗೆಗೆ ಲಿಂಗರಾಜ ಅರಸರ ಕೊಡುಗೆಯೇ ಕಾರಣ. ಆದ್ದರಿಂದಲೇ ಅವರನ್ನು ತ್ಯಾಗವೀರ ಎಂದು ಕೊಂಡಾಡುವುದು.

ತಮ್ಮ ಮಾವಿನ ತೋಪಿನಲ್ಲಿನ ಮಾವಿನ ಗಿಡಕ್ಕೆ ಕಲ್ಲೆಸೆದು ಮಾವಿನಕಾಯಿ ಪಡೆಯಲು ಯತ್ನಿಸಿದ ರಾಜೇಸಾಬ್ ಒಂಟಿ ಎಂಬ ತಮ್ಮ ತೋಟದ ಕಾವಲುಗಾರನ ಮಗನಿಗೆ ಎರಡು ಎಕರೆ ಜಮೀನು ಕೊಟ್ಟು ಆ ದುಡ್ಡಿನಲ್ಲಿ ಆತನನ್ನು ಓದಿಸಲು ಹೇಳಿದ ಮಹಾದಾನಿ ಲಿಂಗರಾಜ ಅರಸರು. ಕಲ್ಲೆಸದ ಬಾಲಕನಿಗೆ ಹಣ್ಣನ್ನು ಕೊಡುವ ಮರಕ್ಕಿಂತ, ಬುದ್ಧಿಶಕ್ತಿ ಇರುವ ಮಾನವನಾದ ತಾನು ಆತನ ಬದುಕಿಗೆ ದಾರಿ ಮಾಡಿಕೊಡಬೇಕು ಎಂಬ ನಿಲುವನ್ನು ಹೊಂದಿದ್ದರು ಲಿಂಗರಾಜ ಅರಸರು.

ಇಂದಿನ ಗದಗ್ ಜಿಲ್ಲೆಯ ಶಿಗ್ಗಿ ಗ್ರಾಮದ ಮಡ್ಲಿ ಮನೆತನದ ಗೂಳಪ್ಪ ಮತ್ತು ಎಲ್ಲಮ್ಮ ದಂಪತಿಗಳ ಮಗ ರಾಮಪ್ಪ ಗೂಳಪ್ಪ ಮಡ್ಲಿ. ಹುಟ್ಟಿದ್ದು 1861 ರ ಜನವರಿ 10ರಂದು. ಶಿರಸಂಗಿ ದೇಶಗತಿ ಮನೆತನದ ಜಯಪ್ಪ ದೇಸಾಯಿ ಮತ್ತು ಗಂಗಮ್ಮ ದಂಪತಿಗಳು 1872ರ ಜೂನ್ ಎರಡರಂದು ರಾಮಪ್ಪನನ್ನು ದತ್ತಕ ಪುತ್ರನಾಗಿ ಸ್ವೀಕರಿಸಿದ ನಂತರ ಲಿಂಗರಾಜ ಅರಸ ಎಂಬ ಹೆಸರಿನಿಂದ ಕರೆಯಲ್ಪಟ್ಟ. ದತ್ತಕ ತಾಯಿ ಗಂಗಾಬಾಯಿಯ ಅಕ್ಕರಾಸ್ಥೆಯಲ್ಲಿ ಬೆಳೆದ ಲಿಂಗರಾಜ ಮುಂದಿನ ವಿದ್ಯಾಭ್ಯಾಸಕ್ಕಾಗಿ ಕೇವಲ ದೇಶಗತಿ ಮನೆತನದವರು ಮಾತ್ರ ಕಲಿಯುತ್ತಿದ್ದ ಸಾಂಗ್ಲಿ ಸಂಸ್ಥಾನದ ಕೊಲ್ಹಾಪುರದ ಬಳಿಯ ಸರ್ದಾರ್ ಹೈಸ್ಕೂಲಿಗೆ ದಾಖಲಾದರು. ಅಲ್ಲಿ ಕೆ ಪಿ ಪುಟ್ಟಣ್ಣಶೆಟ್ಟಿ, ವಾರದ ಮಲ್ಲಪ್ಪ, ಶಾಹು ಮಹಾರಾಜರು ಮುಂತಾದ ಅಗ್ರಗಣ್ಯರು ಅವರ ಸಹಪಾಠಿಗಳಾಗಿದ್ದರು.

ಎರಡೇ ವರ್ಷಗಳಲ್ಲಿ ಅನಾರೋಗ್ಯಕ್ಕೆ ತುತ್ತಾಗಿ 1874ರಲ್ಲಿ ಗಂಗಮ್ಮನವರು ನಿಧನರಾದರು. ಇನ್ನೋರ್ವ ದತ್ತಕ ತಾಯಿ ಉಮಾಬಾಯಿಯವರಿಗೆ ತನ್ನ ಸೋದರ ಯಲ್ಲಪ್ಪ ನಾಗರಳ್ಳಿಯನ್ನು ದತ್ತಕ ಪಡೆಯಬೇಕೆಂಬ ಪ್ರಬಲ ಇಚ್ಛೆ ಹೊಂದಿದ್ದು ಲಿಂಗರಾಜರ ದತ್ತಕದ ವಿರುದ್ಧ ಕೋರ್ಟಿನ ಮೊರೆ ಹೋದಳು. ಆದರೆ ಲಿಂಗರಾಜರ ಪರವಾಗಿ ಹಲವಾರು ಜನರು ನಿಂತ ಪರಿಣಾಮವಾಗಿ ಅರಮನೆಯ ಹೊರಗಿನಿಂದಲೇ ಅಪಾರ ಬೆಂಬಲ ಪಡೆದ ಲಿಂಗರಾಜರ ದತ್ತಕವನ್ನು ಮುಂಬೈ ಹೈಕೋರ್ಟ್ 1880 ರಲ್ಲಿ ಎತ್ತಿ ಹಿಡಿಯಿತು. ಪರಿಣಾಮವಾಗಿ ಸಗೌರವ ಸಮೇತ ಶಿರಸಂಗಿಯ ದೇಶಗತಿ ಮನೆತನದ ಚುಕ್ಕಾಣಿಯನ್ನು ಲಿಂಗರಾಜರು ಹಿಡಿದರು. ಲಿಂಗರಾಜರು ಮನೆತನದ ವಾಡಿಕೆಯಂತೆ ಇಬ್ಬರು ಕನ್ಯೆಯರನ್ನು ವಿವಾಹವಾದರು, ಅವರೇ ಲಿಂಗಮ್ಮ ಮತ್ತು ಚೆನ್ನಮ್ಮ ಈ ಇಬ್ಬರಿಗೂ ಮಕ್ಕಳಾಗದ ಕಾರಣ ಮತ್ತೆ ಇಬ್ಬರನ್ನು ವಿವಾಹವಾದರೂ ಅವರಿಗೂ ಕೂಡ ಮಕ್ಕಳಾಗಲಿಲ್ಲ. ಹಾಗಾಗಿ ಮೂರನೇ ಬಾರಿ ಮತ್ತೆ ಇಬ್ಬರು ಕನ್ಯೆ ಯರನ್ನು ಮದುವೆಯಾದ ಲಿಂಗರಾಜರಿಗೆ ತಮ್ಮ ಕೊನೆಯ ಪತ್ನಿ ಸುಂದರಬಾಯಿಯವರು ಕೊನೆಯವರೆಗೂ ಜೊತೆಯಾದರು. ಇವರು ಮೊದಲ ಬಾರಿಗೆ ವಿವಾಹವಾದಾಗ ಬೇವೂರಿನ ಕಿಲ್ಲೆಯಲ್ಲಿ ವಾಸವಾಗಿದ್ದ ಉಮಾಬಾಯಿಯು ದತ್ತಕ ಪುತ್ರನನ್ನು ಸೊಸೆಯೊಂದಿಗೆ ಔತಣಕ್ಕೆ ಆಹ್ವಾನಿಸಿದ್ದಳು. ಊಟದಲ್ಲಿ ನಿಧಾನವಿಷವಾದ ಪಾದರಸವನ್ನು ಮಿಶ್ರಣ ಮಾಡಿ ಉಣಬಡಿಸಿದ ಪರಿಣಾಮವಾಗಿ ಲಿಂಗರಾಜರ ಆರೋಗ್ಯ ಹದಗೆಟ್ಟು ಅವರು ಅಲ್ಲಿಯೇ ವಿಷಮ ಶೀತ ಜ್ವರಕ್ಕೆ ತುತ್ತಾದರು. ಪಾರಾದ ಲಿಂಗರಾಜರ ದೇಹದಲ್ಲಿನ ಪಾದರಸವನ್ನು ನಾಟಿ ವೈದ್ಯರು ತೆಗೆದು ಹಾಕಿ ಅವರನ್ನು ಕುತ್ತಿನಿಂದ ಪಾರು ಮಾಡಿದರು.

ಲಿಂಗರಾಜರು ಅತ್ಯುತ್ತಮವಾದ ಆಡಳಿತಗಾರರಾಗಿದ್ದರು. ತಮ್ಮ ಸುಪರ್ದಿಯಲ್ಲಿ ಬರುತ್ತಿದ್ದ ಎಲ್ಲ ಹಳ್ಳಿಗಳಲ್ಲಿಯೂ ಗ್ರಾಮ ಸಭೆಯನ್ನು ನಡೆಸುತ್ತಿದ್ದ ಅವರು ಜನರ ಕಷ್ಟ ಸುಖಗಳಿಗೆ ಕಿವಿಯಾಗುತ್ತಿದ್ದರು. ಜೊತೆಗೆ ಜನರ ಅಹವಾಲುಗಳನ್ನು ನ್ಯಾಯ ತೀರ್ಮಾನಗಳನ್ನು ಕೈಗೊಳ್ಳುವುದರಲ್ಲಿ ಎತ್ತಿದ ಕೈಯಾಗಿದ್ದರು. ಆದ್ದರಿಂದಲೇ ಬ್ರಿಟಿಷರು ಅವರನ್ನು ಸೆಕೆಂಡರಿ ಡಿವಿಷನ್ ಮ್ಯಾಜಿಸ್ಟ್ರೇಟ್ (ನ್ಯಾಯಾಧೀಶ) ಎಂದು ಗೌರವ ಪೂರ್ವಕ ನೇಮಕ ಮಾಡಿದ್ದರು.

ಇದರ ಜೊತೆಗೆ ಲಿಂಗರಾಜರು ಮಾದರಿ ಒಕ್ಕಲುತನಕ್ಕೆ ಹೆಸರಾಗಿದ್ದರು. ಅವರ ಒಕ್ಕಲುತನದಲ್ಲಿ ಸುಧಾರಿತ ಕೃಷಿ ಪದ್ಧತಿಗಳು, ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದರು.

40ಎತ್ತು ,20ಒಂಟೆ ,100 ಆಕಳು ಗಳು ಅವರ ಒಕ್ಕಲುತನದ ಮುಖ್ಯ ಶಕ್ತಿಗಳಾಗಿದ್ದವು. ಒಂದು ಬಾರಿ ಭೀಕರ ಬರಗಾಲ ಉತ್ತರ ಕರ್ನಾಟಕವನ್ನು ನಲುಗಿಸಿದಾಗ ನೀರಾವರಿಯ ಮಹತ್ವವನ್ನು ಅರಿತ ಲಿಂಗರಾಜರು ಶಿರಸಂಗಿ ಯ ಗ್ರಾಮ ದೇವತೆಯಾದ ಭವಾನಿ ಕೆರೆಯನ್ನು ನಿರ್ಮಿಸಿದರು. ಸುಮಾರು 85 ಎಕರೆ ವಿಸ್ತೀರ್ಣವುಳ್ಳ ಈ ಭವಾನಿಕೆರೆ ನಿರ್ಮಿಸಲು ಸುಮಾರು 2 ಲಕ್ಷ ರೂಗಳಷ್ಟು ಹಣವನ್ನು ಅಂಬಿನ ಕಾಲದಲ್ಲಿಯೇ ಅವರು ಖರ್ಚು ಮಾಡಿದ್ದರು. ಇಲ್ಲಿಯೂ ಒಂದು ಸ್ವಾರಸ್ಯಕರ ಘಟನೆಯನ್ನು ನೆನಪು ಮಾಡಿಕೊಳ್ಳಬಹುದು. ಈ ಭವಾನಿ ಕೆರೆಯನ್ನು ಕಟ್ಟುವಾಗ ನೆಟ್ಟು ಕಡಿಯುವ ಸ್ಪರ್ಧೆಯನ್ನು ಏರ್ಪಡಿಸಿದ್ದು ಸುಮಾರು 2000 ಜನ ಇದರಲ್ಲಿ ಭಾಗವಹಿಸಿದ್ದರು.ಸುಮಾರು ಮೂವತ್ತು ರೊಟ್ಟಿ ಒಂದು ದೊಡ್ಡ ಡಬ್ಬರಿ ಅನ್ನ/ಸಂಗಟಿ ಉಣ್ಣುವ ಮಾಯಪ್ಪ ಎಂಬ ಓರ್ವ ವ್ಯಕ್ತಿ ತಲೆ ಎತ್ತದೆ ತನ್ನ ಬೆನ್ನ ಮೇಲೆ ದೊಡ್ಡ ಮಣ್ಣಿನ ಹೆಂಟೆಯೊಂದನ್ನು



ಹೇರಿಸಿಕೊಂಡು ಒಂದೇ ಸಮನೆ ನಟ್ಟು ಕಡಿಯುತ್ತಾ ಹೋದಾಗ ಆತನ ಬೆವರಿನ ನೀರಿನಿಂದ ಬೆನ್ನ ಮೇಲಿನ ಮಣ್ಣಿನ ಹೆಂಟೆ ಕರಗಿ ನೆಲ ಸೇರಿದ್ದನ್ನು ಇಂದಿಗೂ ಆ ಭಾಗದ ಜನರ ಬಾಯಲ್ಲಿ ದಂತಕತೆಯಾಗಿ ನಿರೂಪಣೆಗೊಳ್ಳುತ್ತದೆ. ಹಾಗೆ ನೆಟ್ಟು ಕಡೆದ ಮಾಯಪ್ಪನಿಗೆ ಎರಡು ಎಕರೆ ಜಮೀನನ್ನು ಬಹುಮಾನ ರೂಪವಾಗಿ ಲಿಂಗರಾಜ ಅರಸರು ನೀಡಿದರು.

ತದನಂತರ ಇಂದು ಜೋಗುಳ ಬಾವಿ ಎಂದು ಕರೆಯಲ್ಪಡುವ ಸವದತ್ತಿ ಭಾಗದಲ್ಲಿರುವ ಹೊಸಬಾಳು ಕೆರೆಯನ್ನು ಲಿಂಗರಾಜರು ನಿರ್ಮಿಸಿದರು. ಸವದತ್ತಿ ಎಲ್ಲಮ್ಮನ ಗುಡ್ಡದ ಸುತ್ತಲಿರುವ ಏಳುಕೊಳ್ಳಗಳ ಮಳೆ ನೀರು ಸಂಗ್ರಹವಾಗಿ ಬೀಳುವಂತೆ ತಾವರೆಕೆರೆ ಬಾಂದಾರ ವನ್ನು ಕೂಡ ಅವರು ನಿರ್ಮಿಸಿದರು.

ಲಿಂಗರಾಜರ ಕೃಷಿ ಕಾರ್ಯ ಮತ್ತು ನ್ಯಾಯ ನಿರ್ಣಯ ಶಕ್ತಿಯನ್ನು ಕಂಡ ಅಂದಿನ ಬ್ರಿಟಿಷ್ ಸರ್ಕಾರವು ಅವರನ್ನು ಎಡ್ವರ್ಡ್ ದೊರೆಯ ಪಟ್ಟಾಭಿಷೇಕ ಮಹೋತ್ಸವದ ದೆಹಲಿ ಸಿಂಹಾಸನಾರೋಹಣ ಕಾರ್ಯಕ್ರಮಕ್ಕೆ ಆಹ್ವಾನಿಸಿತು ಹಾಗೆ ಭಾರತ ದೇಶದಿಂದ ಬ್ರಿಟಿಷ್ ಸಾಮ್ರಾಜ್ಯದ ಆಹ್ವಾನ ಪಡೆದ ಏಕೈಕ ವ್ಯಕ್ತಿ ಲಿಂಗರಾಜ ಅರಸರು ಮಾತ್ರ.

ಮುಂದೆ ಅಥಣಿಯ ಶಿವಯೋಗಿಗಳಿಂದ ಲಿಂಗ ದೀಕ್ಷೆ ಪಡೆದ ಲಿಂಗರಾಜ ಅರಸರು 1883 ರಲ್ಲಿ ತಮ್ಮ ಆತ್ಮಸಖ ಅರಟಾಳ್ ರುದ್ರಗೌಡರ ಜೊತೆಗೂಡಿ ಲಿಂಗಾಯತ ಎಜುಕೇಶನ್ ಸೊಸೈಟಿಯನ್ನು ಸ್ಥಾಪಿಸಿದರು. ಇವರ ಜೊತೆಗೆ ಕಿತ್ತೂರು ರೇವಣಸಿದ್ದಪ್ಪ, ರಾಜ ಲಖಮಗೌಡರು



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**

ಮುಂತಾದವರು ಜೊತೆಗೂಡಿದರು. ಅಮ್ಮಣಗಿ ಗ್ರಾಮದಲ್ಲಿ ಸುಮಾರು 1400 ಎಕರೆ ಜಮೀನನ್ನು ಲಿಂಗಾಯತ ಎಜುಕೇಶನ್ ಸೊಸೈಟಿಯ ಅಭಿವೃದ್ಧಿಗೆ ಲಿಂಗರಾಜ ಅರಸರು ಮೀಸಲಿಟ್ಟರು. 1894 ರಲ್ಲಿ ಏಳೂರು ಗೌಡರ ಸಹಕಾರ ಅಡತಿ ಅಂಗಡಿ ಯನ್ನು ಸ್ಥಾಪಿಸಿದ ಲಿಂಗರಾಜ ಅರಸರು ಬೈಲಹೊಂಗಲದ ಜಿನ್ನಿಂಗ್ ಫ್ಯಾಕ್ಟರಿಯಲ್ಲಿ 30 ಶೇಕಡ ಶೇರುಗಳನ್ನು ಖರೀದಿಸಿದರು.

1902 ರಲ್ಲಿ ಹಾನಗಲ್ಲ ಗುರು ಕುಮಾರಸ್ವಾಮೀಜಿಯವರ ಆಶಯದಂತೆ ಸ್ನೇಹಿತ ಅರಟಾಳ್ ರುದ್ರಗೌಡ, ಮರೇವಾಡ ಗದಿಗೆಯ್ಯ, ಕಿತ್ತೂರು ರೇವಣಸಿದ್ದಪ್ಪ, ಕೂಗನೂರು ಇವರ ಜೊತೆಯಲ್ಲಿ ಕುದುರೆ ಸಾರೋಟಿನಲ್ಲಿ ಪ್ರವಾಸ ಮಾಡಿ ವೀರಶೈವ ಲಿಂಗಾಯತರನ್ನು ಒಗ್ಗೂಡಿಸುವ ಕೆಲಸವನ್ನು ಮಾಡಿದರು.

1904ರ ಮೇ 13 14 ಮತ್ತು 15 ರಂದು ಪ್ರಥಮ ವೀರಶೈವ ಅಖಿಲ ಭಾರತ ಮಹಾಸಭಾ ಸಮ್ಮೇಳನವು ಹಾನಗಲ್ಲಿನ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ಲಿಂಗರಾಜ ಅರಸರ ಸಂಸ್ಥಾಪಕ ಅಧ್ಯಕ್ಷತೆಯಲ್ಲಿ ನಡೆಯಿತು ಸುಮಾರು 3000ಕ್ಕೂ ಹೆಚ್ಚು ಜನ ಸೇರಿದ ಈ ಸಮ್ಮೇಳನದಲ್ಲಿಯೂ ಕೂಡ ಲಿಂಗರಾಜ ಅರಸರು 5,000 ರೂಗಳನ್ನು ಲಿಂಗಾಯತ ಸಮಾಜದ ಅಭಿವೃದ್ಧಿಗೆ ನೀಡಿದರು.

ಈ ಸಮ್ಮೇಳನದಲ್ಲಿ ಮುಖ್ಯವಾಗಿ ವಿಧವಾ ವಿವಾಹ, ಸರಳ ವಿವಾಹ, ಸ್ತ್ರೀ ಶಿಕ್ಷಣ, ಸಾಗರದಾಚೆಯ ಶಿಕ್ಷಣಕ್ಕೆ ಆದ್ಯತೆ, ವೀರಶೈವ ವೇದಿಕ ಪಾಠಶಾಲೆಗಳು ಕುರಿತಾಗಿ ಅತ್ಯಂತ ಪ್ರಬುದ್ಧವಾಗಿ ವಿಷಯಗಳನ್ನು ಪ್ರಸ್ತಾಪಿಸಿದ ಲಿಂಗರಾಜರು ಅವುಗಳ ಅನುಷ್ಠಾನಕ್ಕೆ ಒತ್ತಾಯಿಸಲು ಕ್ರಮ ಕೈಗೊಂಡರು. ಇದರ ಜೊತೆಗೆ ಕೋರ್ಟಿನ ಹೊರಗಡೆ ಸಮಾಜದ ಹಿರಿಯರ ಸಮ್ಮುಖದಲ್ಲಿ ನ್ಯಾಯ ಸಭೆ ನಡೆಸಿ ತಮ್ಮ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಒತ್ತಾಯಿಸಿದರು.

ವೀರಶೈವ ಧರ್ಮದ ಉಳಿವಿಗೆ ಜಂಗಮ ಪಾಠಶಾಲೆಗಳ ಅವಶ್ಯಕತೆಯನ್ನು ಮನಗಂಡು ಜಂಗಮ ಪಾಠಶಾಲೆಗಳನ್ನು ಪ್ರಾರಂಭಿಸಲು ಒತ್ತಾಯಿಸಿ ಮುಂದೆ 1908ರಲ್ಲಿ ಬಾದಾಮಿಯಲ್ಲಿ ಶಿವಯೋಗ ಮಂದಿರವನ್ನು ಸ್ಥಾಪಿಸಲು ಕಾರಣಿಭೂತರಾದರು 1905ರ ಜುಲೈ 13, 14 ಮತ್ತು 15 ರಂದು ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾ ಎರಡನೇ ಸಮ್ಮೇಳನವನ್ನು ಪುಟ್ಟಣ್ಣ ಶೆಟ್ಟಿಯವರ ನೇತೃತ್ವದಲ್ಲಿ ಲಿಂಗರಾಜ ಅರಸರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಅಲ್ಲಿಯೂ ಕೂಡ ಲಿಂಗರಾಜ ಅರಸರು 2, 000ರೂಗಳನ್ನು ದೇಣಿಗೆಯಾಗಿ ನೀಡಿದರು. ಇವರ ದಾನ ಗುಣವನ್ನು ಕಂಡ ಅಂದಿನ ಮೈಸೂರಿನ ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನ ತಮ್ಮ ಸಂಸ್ಥಾನಕ್ಕೆ ಲಿಂಗರಾಜ ಅರಸರನ್ನು ಆಮಂತ್ರಿಸಿ ಗೌರವ ಸನ್ಮಾನ ಮಾಡಿದರು.

ತಮ್ಮ ಸಂಸ್ಥಾನಕ್ಕೆ ಸೇರಿದ ಸರಿ ಸುಮಾರು 5,72,156 ಎಕರೆ ಜಮೀನನ್ನು ದಾನ ಮಾಡಿದ ಲಿಂಗರಾಜ ಅರಸರು ತಮ್ಮ ಸುಪರ್ದಿಯಲ್ಲಿದ್ದ 9ಕ್ಕೂ ಹೆಚ್ಚು ಸಂಧೂಕಗಳಲ್ಲಿನ ಚಿನ್ನ ಬೆಳ್ಳಿ ರತ್ನಗಳನ್ನು ಮತ್ತು ಸಾವಿರಾರು ರೂಗಳಷ್ಟು ಹಣವನ್ನು ಸಮಾಜದ ಒಳಿತಿಗೆ ದಾನವಾಗಿ ನೀಡಿದರು. ಇಂದಿನ ಪ್ರತಿಷ್ಠಿತ ಕೆ ಎಲ್ ಇ ಸೊಸೈಟಿ, ಬಿ ಎಲ್ ಡಿ ಈ ಸಂಸ್ಥೆ ಗಳಿಗೆ ದೇವಿ ಹೊಸೂರಿನಲ್ಲಿ ಕೃಷಿ ತರಬೇತಿಗಾಗಿ ಭೂದಾನ ಮಾಡಿದ ಲಿಂಗರಾಜ ಅರಸರು ಕಾಶಿಯ ಜಂಗಮವಾಡಿ ಮಠ, ರಾಮೇಶ್ವರದ ದೇವಸ್ಥಾನಗಳಿಗೆ ಕೂಡ ಭೂದಾನ ಮಾಡಿದರು. ನವಲಗುಂದದ ಸೂಫಿ ಸಂತ ಸೈಯದ್ ಅಮೀನ್ ಶಾ ಹುಸೇನ್ ಅವರಿಗೆ ಭೂದಾನ ಮಾಡಿದ್ದಲ್ಲದೆ,ಅಜ್ಮೀರದ ಸಂತ ಮೈನುದ್ದಿನ್ ಚಿಸ್ತಿ ಅವರಿಗೆ ಪಾರಿವಾಳ ಸಾಕಲು ಕೂಡ ಭೂದಾನ ಮಾಡಿದ ಲಿಂಗರಾಜ ಅರಸರು ಸಿರಸಂಗಿ ವಾಡೆಯಲ್ಲಿ ದೀವಟಿಗೆ ಹಿಡಿಯುವ ಕೆಲಸ ಮಾಡುತ್ತಿದ್ದ ವ್ಯಕ್ತಿಗೂ ಮಾವಿನ ತೋಪಿಗೆ ಕಲ್ಲೆಸದ ಮುಸಲ್ಮಾನ ಬಾಲಕನಿಗೂ ಕೂಡ ಭೂದಾನ ಮಾಡಿದ ಮಹಾದಾನಿ. ಪತ್ರಿವನ ಮಠ, ಶಿರಸಂಗಿಯ ಕಾಳಿಕಾದೇವಿಯ ಪೂಜಾರಿಕೆಗೆ ಕೂಡ ಭೂದಾನ ಮಾಡಿದರು ಲಿಂಗರಾಜ ಅರಸರು.

1906 ರಲ್ಲಿ ತಮ್ಮ ಹೊಲದಲ್ಲಿ ನಡೆಯುತ್ತಿದ್ದ ವ್ಯವಸಾಯ ಕಾರ್ಯದ ಕ್ಷೇತ್ರ ವೀಕ್ಷಣೆ ಮಾಡುತ್ತಿರುವಾಗ ತೀವ್ರವಾದ ಹೊಟ್ಟೆ ನೋವು ಕಾಣಿಸಿಕೊಂಡು ಅವರ ಆರೋಗ್ಯ ಕ್ಷೀಣಿಸಿತು ಯಾವುದೇ ಔಷದೋಪಚಾರಕ್ಕೆ ಬಗ್ಗದ ಅವರ ದೇಹಾರೋಗ್ಯ 1906ರ ಮಾರ್ಚ್ ತಿಂಗಳಲ್ಲಿ ಮತ್ತಷ್ಟು ಹದಗೆಟ್ಟು ಅವರು ನಿಧನ ಹೊಂದಿದರು. ಅವರ ಸಮಾಧಿಯನ್ನು ಈಗಿನ ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಮಾಡಲಾಗಿದ್ದು, ಅಲ್ಲಿ ಇಂದಿಗೂ ಲಿಂಗರಾಜರು ಭಕ್ತರಿಂದ ಪೂಜೆಗೊಳ್ಳುತ್ತಿದ್ದಾರೆ. ಅವರು ಸಮಾಧಿಗೊಂಡ ಸ್ಥಳವನ್ನು ಥಡಿ ಮಠ ಎಂದು ಕರೆಯಲಾಗುತ್ತಾರೆ

ಕರ್ನಾಟಕದ ಎಲ್ಲ ಮಠಮಾನ್ಯಗಳಿಗೆ, ಶಿಕ್ಷಣ ಸಂಸ್ಥೆಗಳಿಗೆ, ಕೃಷಿ ಭೂಮಿಯನ್ನು ಚಿನ್ನ ಒಡವೆ ಹಣದ ಸಹಾಯ ಮಾಡಿದ ಮಹಾದಾನಿ ಶಿರಸಂಗಿ ಲಿಂಗರಾಜರನ್ನು 1907ರಲ್ಲಿ ಸೊಲ್ಲಾಪುರದಲ್ಲಿ ನಡೆದ ಅಖಿಲ ಭಾರತ ವೀರಶೈವ ಮಹಾಸಭಾ ಮೂರನೇ ಸಮ್ಮೇಳನದಲ್ಲಿ 64ನೇ ವೀರಶೈವ ಪುಣ್ಯ ಪುರುಷ ಎಂದು ಮರಣೋತ್ತರವಾಗಿ ಘೋಷಿಸುವ ಮೂಲಕ ಗೌರವಿಸಲಾಯಿತು.

ಅವರ ಮರಣದ ನಂತರ ಅವರ ಉಯಿಲು ಪತ್ರವನ್ನು ಅವರ ಸ್ನೇಹಿತ ಅರಟಾಳ ರುದ್ರಗೌಡರ ನೇತೃತ್ವದಲ್ಲಿ ಬ್ರಿಟಿಷ್ ಅಧಿಕಾರಿಗಳು ಮತ್ತು ಸಮಾಜದ ಮುಖಂಡರ ಸಮ್ಮುಖದಲ್ಲಿ ತೆರೆದು ಓದಲಾಯಿತು. ಅದರ ಮುಖ್ಯ ಅಂಶಗಳಲ್ಲಿ ತಮ್ಮ ಸ್ನೇಹಿತ ಅರಟಾಳ ರುದ್ರಗೌಡರು, ಸತ್ಯಪ್ಪ ಗಾಳಿ, ರೇವಣಪ್ಪ ಕಿತ್ತೂರ್, ಭೀಮನಗೌಡ ಪಾಟೀಲ್, ಉಕ್ಕಲಿಯ ರಾಯನಗೌಡ ಇಂಗಳೇಶ್ವರ, ತಿಕೋಟಾದ ತಿಮ್ಮನಗೌಡ ಪಾಟೀಲ್, ಮಲ್ಲಿಕಾರ್ಜುನ್ ರೈನಾಪುರ್ ಇವರನ್ನು ಕಾರ್ಯಕಾರಿ ಮಂಡಳಿಯ ಸದಸ್ಯರನ್ನಾಗಿಸಿ ನವಲಗುಂದ– ಶಿರಸಂಗಿ ಟ್ರಸ್ಟ್ ಫಂಡ, ಬೆಳಗಾವಿ ಹೆಸರಿನಲ್ಲಿ ತಮ್ಮ ಜಂಗಮ ಮತ್ತು ಸ್ಥಾವರ ಆಸ್ತಿಯಿಂದ ಬರುವ ಎಲ್ಲಾ ಉತ್ಪನ್ನವನ್ನು ಟ್ರಸ್ಟಿಗೆ ಜಮಾ ತೆಗೆದುಕೊಂಡು ಆ ಟ್ರಸ್ಟ್ ಫಂಡಿನ ಹಣವನ್ನು ಯಾವತ್ತೂ ಲಿಂಗವಂತ ಸಮಾಜದ ಮಕ್ಕಳ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕು ತಮ್ಮ ಪತ್ನಿ ಸುಂದರಾಬಾಯಿಗೆ ಪ್ರತಿ ತಿಂಗಳು ಒಂದು ನೂರು ರೂಪಾಯಿಗಳನ್ನು ಟ್ರಸ್ಟ್ ನಿಂದ ಕೊಡತಕ್ಕದ್ದು ಎಂದು ಬರೆದಿದ್ದರು.

ಉಯಿಲಿನ ಲಿಖಿತವನ್ನು ಕೇಳಿದ ಅಂದಿನ ಬ್ರಿಟಿಷ್ ಅಧಿಕಾರಿ ಜಾಕ್ಸನ್ ಮೂಕ ವಿಸ್ಮಿತನಾಗಿ ಇಂತಹ ದಾನಿಗಳು ಸಮಾಜದಲ್ಲಿ ಸಾವಿರಾರು ವರ್ಷಕ್ಕೆ ಒಬ್ಬರು ಮಾತ್ರ ಸಿಗುತ್ತಾರೆ ಎಂದು ಗದ್ಗದಿತನಾಗಿ ಉದ್ಘರಿಸಿದನು. ಇಂದಿಗೂ ಕೂಡ ಇಂಗ್ಲೆಂಡಿನ ಬ್ರಿಟಿಷ್ ಮ್ಯೂಸಿಯಂನಲ್ಲಿ ಲಿಂಗರಾಜರ ಭಾವಚಿತ್ರ ಮತ್ತು ಅವರ ದಾನ ಪತ್ರವನ್ನು ಮುಕ್ತ ಪ್ರದರ್ಶನಕ್ಕೆ ಇಡಲಾಗಿದೆ.

ಲಕ್ಷಾಂತರ ವಿದ್ಯಾರ್ಥಿಗಳು ಓದುತ್ತಿರುವ ಸಪ್ತರ್ಷಿಗಳೆಂದೇ ಹೆಸರುವಾಸಿಯಾದ ಏಳು ಜನ ಸೇರಿ ಸ್ಥಾಪಿಸಿದ ಕೆಎಲ್‌ಇ ಟ್ರಸ್ಟ್ ತನ್ನ ಮೊದಲ ಕಾಲೇಜಿಗೆ ಲಿಂಗರಾಜ ಕಾಲೇಜ ಎಂದು ಹೆಸರಿಸಿ ಲಿಂಗರಾಜ ಅರಸರಿಗೆ ಗೌರವ ಸಲ್ಲಿಸಿದೆ. ಲಿಂಗರಾಜರು ಪಂಚಭೂತಗಳಲ್ಲಿ ಲೀನವಾಗಿರಬಹುದು ಆದರೆ ಅವರು ಹಚ್ಚಿದ ಜ್ಞಾನ ಜ್ಯೋತಿಯ ಕಿರಣಗಳು ಪ್ರಪಂಚದ ಎಲ್ಲ ದೇಶಗಳಲ್ಲಿ ಹರಡಿ ಭವ್ಯ ಬೆಳಕನ್ನು ಹರಡಿವೆ, ಮುಂದೆಯೂ ಹರಡುತ್ತಲೇ ಸಾಗುತ್ತದೆ.

ತ್ಯಾಗವೀರ ಲಿಂಗರಾಜ ಅರಸರ ಈ ದಾನ ಕೋಟ್ಯಾಂತರ ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಇಂತಹ ಪುಣ್ಯ ಪುರುಷನನ್ನು ಪಡೆದ ಆ ತಾಯಿ ಕನ್ನಡಮ್ಮ ಧನ್ಯಳಾಗಿದ್ದಾಳೆ. ಇಂತಹ ಪುಣ್ಯ ಪುರುಷರು ಮತ್ತೆ ಮತ್ತೆ ಹುಟ್ಟಿ ಈ ಭರತ ಭೂಮಿಯನ್ನು ಪಾವನ ಮಾಡಲಿ ಎಂದು ಆಶಿಸುವ.

# ಮಕ್ಕಳ ನಗುವನ್ನು ನೋಡ ಬಯಸಬೇಕು

ನ್ಯಾನೋ ಕಥೆ

ತಾಯಿ ತನ್ನ ಮಗಳಿನ ಓದಿಗೆ ಸಾಕಷ್ಟು ಹಣ ಖರ್ಚುಮಾಡಿ ಬದುಕನ್ನು ಸವೆಸುತ್ತಾರೆ ಆದರೆ ಮಗಳು ಅದನ್ನೆಲ್ಲಾ ಬಿಟ್ಟು ತನ್ನ ಇಷ್ಟದ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ದುಡಿಯುತ್ತಾಳೆ ಮೊದಲೆಲ್ಲ ತಾಯಿ ಮಗಳಿಗೆ ಅಷ್ಟೊಂದು ಖರ್ಚು ಮಾಡಬೇಡ ಸ್ವಲ್ಪ ಸ್ವಲ್ಪ ಕೂಡಿಸಿ ಹಿಡಿ ಎಂತೆಲ್ಲಾ ತಿಳುವಳಿಕೆ ಹೇಳುತ್ತಿದ್ದರು ಆಗ ಮಗಳಿಗೆ ಅನಿಸುತಿತ್ತು ನನ್ನ ತಾಯಿ ಬಹಳ ಜಿಪುಣಿ ಹಾಗೂ ನಮ್ಮಆಸೆಯಂತೆ ಇರಲು ಬಿಡಲ್ಲ ಎಂದು ಬೇಜಾರು ಮಾಡಿಕೊಳ್ಳುತ್ತಿದ್ದಾರು ಹೀಗಿರುವಾಗ ಒಂದು ಸಾರಿ ಮಗಳು ತಾಯಿಗೆ ಒಂದು ಬಂಗಾರದ ಉಂಗುರವನ್ನು ಉಡುಗೊರೆಯಾಗಿ ತಂದುಕೊಡುತ್ತಾಳೆ ಆಗ ತಾಯಿ ಅದನ್ನು ನೋಡಿ ಚೆನ್ನಾಗಿದೆ ಎನ್ನುತ್ತಾರೆ ಆಗ ಮಗಳು ನಿಮಗೇ.. ತಂದಿರುವುದು ಬೆಲೆ ಎಷ್ಟು ಎಂದು ಕೇಳಲ್ವಾ ಎಂದು.... ಅದಕ್ಕೆ ತಾಯಿ ಮನಸ್ಸಿನಲ್ಲಿ (ಅಂದು ಕೊಳ್ಳುತ್ತಾರೆ ಇಂತಹ ನೂರು ಪಟ್ಟು ಖರ್ಚು ಮಾಡಿ ಮಕ್ಕಳ ಭವಿಷ್ಯ ರೂಪಿಸ ಬೇಕೆಂದು ಕಷ್ಟಪಟ್ಟರೂ ನೆಮ್ಮದಿ ಸುಖ ದೂರದ ಮಾತಾಗಿ ಮನೆ ಮಂದಿಯೆಲ್ಲಾ ದುಃಖಪಡುವಂಟಾಗಿತ್ತು ಆದರೆ ಅವರ ಇಷ್ಟಕ್ಕೆ



ಬಿಟ್ಟಿದ್ದಕ್ಕೆ ಅವರ ದುಡಿಮೆಗೆ ಅಮೂಲ್ಯ ಬೆಲೆಯಿದೆ ಅದರಿಂದ ) ಪ್ರಶ್ನೆ ಕೇಳದೆ ಇರಲಿ ಬಿಡು ಇಲ್ಲಿ ಬೆಲೆ ಮುಖ್ಯವಲ್ಲ ಬದಲಾಗಿ ನಿನ್ನ ಮುಖದ ಮೇಲಿನ ನಗುವಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು ? ಆತ್ಮೀಯರೇ ಕೆಲವು ಸಲ ಮಕ್ಕಳಿಗಾಗಿ ಮಾಡುವ ಕೆಲಸ ಸಮಯ ಹಣ ವ್ಯರ್ಥವಾದರೂ ಚಿಂತಿಸಬೇಕಿಲ್ಲ ಬದಲಾಗಿ ಅವರ ಸಂತೋಷಕ್ಕೆ ಆದ್ಯತೆ ಕೊಡಬೇಕು ಅಷ್ಟೇ ಅಲ್ಲವೇ ?

**- GR ಬಸವರಾಜೇಶ್ವರಿ**
**ಹವ್ಯಾಸಿ ಬರಹಗಾರರು**
**ಹಗರಿಗಜಾಪುರ**

# ಬಾಗಿಲನು ತೆರೆದು

ಮುಂದುವರೆದಭಾಗ.....

ಈ ಪ್ರಕಾರವಾಗಿ ಪ್ರತಿಷ್ಠೆಯನ್ನೂ ಅಲಂಕಾರವನ್ನೂ ಬಾಚಿಕೊಂಡ ಮುಂಬಾಗಿಲ ಭಾಗ್ಯ, ಪಾಪದ ಹಿಂಬಾಗಿಲಿಗೆ ಇರುವುದಿಲ್ಲ. ಅದಕ್ಕೆ ಜಾಲಿ ಬೇವು ಜಂಗಲವುಡ್. ಆದರೇನಂತೆ, ಬಾಳಿನ ಕ್ರಾಂತಿಕಾರಕ ನಿರ್ಧಾರಗಳಿಗೆ ಕಾರಣವಾಗುವುದು ಅದುವೇ. 'ಮದುಮಗಳು' ಕಾದಂಬರಿಯಲ್ಲಿ ಬೇಡದ ಮದುವೆ ತಪ್ಪಿಸಿಕೊಂಡು ಪ್ರಿಯತಮನ ಕೂಡಲು ಚಿನ್ನಮ್ಮ ಬಳಸುವುದು ಇದೇ ಬಾಗಿಲನ್ನು. ಹಳ್ಳಿಯಲ್ಲಿದ್ದ ನಾವು ಪೇಟೆಯ ಬಾಡಿಗೆ ಮನೆಗೆ ಬಂದಾಗ, ಅದಕ್ಕೆ ಹಿತ್ತಲ ಬಾಗಿಲೇ ಇಲ್ಲದಿರುವುದು ದಿಗಿಲಾಗಿತ್ತು. ಹಿತ್ತಲಬಾಗಿಲನ್ನು ಇಡಲು ನಿರಾಕರಿಸುವುದು ಸದಸ್ಯರ ವಾಕ್ ಸ್ವಾತಂತ್ರ್ಯ ಕಿತ್ತುಕೊಳ್ಳುವುದು ಎಂದರ್ಥ. ಮುಂಬಾಗಿಲಿಂದ ದಾಳಿಯಾದರೆ ತಪ್ಪಿಸಿಕೊಳ್ಳುವ ಅವಕಾಶವನ್ನು ಗುಪ್ತದ್ವಾರದ ಮೂಲಕ ರಾಜರು ಇರಿಸಿಕೊಂಡಿದ್ದರು. ಹೀಗೆಂದೇ ಸಾಮ್ರಾಜ್ಯಗಳು ನಿಡುಗಾಲ ಉಳಿದು ಬಾಳಿದವು. ಹಿಂಬಾಗಿಲು ವಂಶವೃಕ್ಷದ ಅವ್ಯಕ್ತ ಚರಿತ್ರೆಕಾರ. ಅದಕ್ಕೆ ಬಾಯಿ ಬಂದದ್ದಾದರೆ, ನೂರಾರು ಪ್ರೇಮದ ಪಿಸುಸಂಭಾಷಣೆ, ಚುಂಬನ ಶಬ್ದ, ದುಃಖಿತರ ನಿಟ್ಟುಸಿರು ಕೇಳಬಹುದು. ಹಿಂದಿನದನ್ನು ನೆನೆಸಿಕೊಂಡು ಹಿತ್ತಲಬಾಗಿಲಲ್ಲಿ ಅತ್ತರಂತೆ ಎಂಬ ಗಾದೆ, ದುಃಖಿತರ ಅಳಲನ್ನು ಕೇಳುವ ಕರುಣೆಯ ಕಿವಿ ಅದಕ್ಕಿದೆ ಎಂದು ಹೇಳುತ್ತಿದೆ. ಹಿತ್ತಲ ಬಾಗಿಲು ಬುದ್ಧಮಾರ್ಗಿ.

ಬಾಗಿಲು ಮುಚ್ಚುವುದು ಸಂಬಂಧ ಮುರಿದುಕೊಳ್ಳುವುದರ ಸಂಕೇತ. ದುರ್ಬಲರು ತಮ್ಮ ಅಭಿಮಾನಕ್ಕೆ ಪೆಟ್ಟು ಬಿದ್ದವರು 'ನಿನ್ನ ಮನೆ ಹೊಸಲು ತುಳಿಯಲ್ಲ' 'ನಿನ್ನ ಮನೆ ಬಾಗಿಲಿಗೆ ಬಂದಿಲ್ಲ' ಎನ್ನುವುದುಂಟು; ಅಪ್ಪನೊಟ್ಟಿಗೆ ಗುದ್ದಾಡಿಕೊಂಡ ಬಂಡುಕೋರ ಮಗ 'ಮನೆಯ ಹೊಸಲನ್ನು ಮತ್ತೆ ತುಳಿಯಲಾರೆ' ಎಂದು ಗೃಹತ್ಯಾಗ ಮಾಡಬಹುದು. ಆದರೆ ಶಪಥ ಭಗ್ನವಾಗುವ ದಿನ ಬೇಗನೆ ಬರುತ್ತದೆ. ಅಪ್ಪನಾದರೂ 'ಅವನ ಪಾಲಿಗೆ ನನ್ನ ಮನೆಯ ಬಾಗಿಲು ಮುಚ್ಚಿತು' ಎಂದು ಹತಾಶೆಯಿಂದ ಆಡಬಹುದು. ಆದರೆ ಮಗ ಮರಳಿ ಬರಲೆಂದು ಎದೆಕದ ತೆರೆದುಕೊಂಡೇ ಇರುತ್ತದೆ. ಅಹಮಿಕೆ ಕರಗಿದಾಗ ಅಂತರಂಗದ ಬಾಗಿಲುಗಳು ತಂತಾನೆ ತೆರೆಯುತ್ತವೆ. ಕೇದಾರ ಬದರಿಗಳಲ್ಲಿ ಹಿಮಗಾಲಕ್ಕೆ ಮುಚ್ಚಿಕೊಳ್ಳುವ ಬಾಗಿಲುಗಳು, ಬಿಸಿಲಿಗೆ ಹಿಮ ಕರಗಿದಾಗ ಬೇಸಗೆಯಲ್ಲಿ ತೆರೆಯುತ್ತದೆ. ಋತುಕಾಲಕ್ಕೂ ಬಾಗಿಲ ಕಾರ್ಯಾಚರಣೆಗೂ ಅವಿನಾ ಸಂಬಂಧ.

ವ್ಯಕ್ತಿಯೊ ಸಮಾಜವೊ ದೇಶವೊ ಬಾಗಿಲು ಕಿಟಕಿಗಳನ್ನು ಬೇರೆಬೇರೆ ಪ್ರಭಾವದ ಗಾಳಿಬೆಳಕಿಗೂ ತೆರೆಯಬೇಕಾಗುವುದು. ಭಾರತ ಉದ್ದಕ್ಕೂ ಪ್ರಭಾವಗಳಿಗೆ ತನ್ನ ಬಾಗಿಲನ್ನು ಮುಚ್ಚಿಕೊಳ್ಳಲಿಲ್ಲ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಪುಸ್ತಕವೊಂದೇ ಸಾಕು– ಎಷ್ಟೊಂದು ಹಣ್ಣು ತರಕಾರಿ ವಿಲಾಯತಿನಿಂದ ಬರಮಾಡಿಕೊಂಡಿದ್ದೇವೆ ಎಂದರಿಯಲು. ಆದರೆ ಬಾಗಿಲು ತೆರೆದಾಗ ಒಳಿತೇ ನುಗ್ಗುತ್ತದೆಯೆಂದು ಗ್ಯಾರಂಟಿಯಿಲ್ಲ. ಬಾಗಿಲು ಅಮಲಿನಲ್ಲಿರುವ ದ್ವಾರಪಾಲಕನಂತೆ ಬಂದವರಿಗೆಲ್ಲ ಸ್ವಾಗತ ಕೋರಬಹುದು. ಎಷ್ಟು ಯಾವಾಗ ಯಾಕಾಗಿ ತೆಗೆಯಬೇಕು ಅಥವಾ ಮುಚ್ಚಬೇಕು ಎಂಬ ಖಬರು ಬಾಗಿಲಾಳಿಗೆ ಇರಬೇಕು. ಇಂಗ್ಲೆಂಡಿನ ವ್ಯಾಪಾರಿಗಳಿಗೆ ಬಾಗಿಲು ತೆರೆದ ಮೊಘಲ್ ದೊರೆಗಳಿಗೆ ಅವರು ಇಡೀ ದೇಶವನ್ನೇ ಹಿಡಿಯುವವರೆಂಬ ಖಬರಿತ್ತೇ? ಇಂಗ್ಲೆಂಡಿನ ಪದವೀಧರ ಗಾಂಧಿಯವರೆಂದರು: 'ನಾವು ನಮ್ಮ ಮನೆಯ ಬಾಗಿಲು ಕಿಟಕಿ ತೆರೆದಿಡುತ್ತೇವೆ. ಒಳ್ಳೆಯ ಗಾಳಿ ಬೆಳಕು ಬರಲಿ. ಆದರೆ ಬಿರುಗಾಳಿ ಮನೆಯನ್ನು ಕೊಚ್ಚಿ ಹೋಗುವುದಾದರೆ, ಬಾಗಿಲು ಕಿಟಕಿ ಮುಚ್ಚುವೆ'.

ಉಳ್ಳವರ ಮನೆಬಾಗಿಲು ಅವರ ಮುಖದ ಗಾಂಭೀರ್ಯದಂತೆ ಸಾಮಾನ್ಯವಾಗಿ ಮುಚ್ಚಿಕೊಂಡಿರುತ್ತವೆ. ದುಡಿವ ವರ್ಗದ ಬೀದಿಗಳಲ್ಲಿ ಮನೆ ಮತ್ತು ಸಾರ್ವಜನಿಕದ ನಡುವೆ ಹೆಚ್ಚು ಫರಕಿಲ್ಲ. ಮನೆಮಂದಿಯ ಅರ್ಧ ಆಯಸ್ಸು ಜಗುಲಿ ಹೊಸಲು ಬಾಗಿಲಲ್ಲೇ ಕಳೆಯುವುದು. ಹಿರಿಯರು ಜಗುಲಿಯ ತೊಡೆಗಳ ಮೇಲೆ ಕೂತು, ತಮ್ಮ ಮಡಿಲಲ್ಲಿ ಎಳೆಗೂಸುಗಳನ್ನು ಆಡಿಸುತ್ತ, ಕೆಮ್ಮುತ್ತ ಕ್ಯಾಕರಿಸುತ್ತ, ಬೀದಿಯಲ್ಲಿ ಹೋಗಿಬರುವವರನ್ನು ಮಾತಾಡಿಸುತ್ತ ಇರುವರು. ನನ್ನಪ್ಪನಿಗೆ ಜಗುಲಿಕಟ್ಟೆಯ ಮೇಲೆ ಓಲಗ ಕೊಡುವುದು ಖುಶಿಯ ವಿಚಾರವಾಗಿತ್ತು. ಕೆಲವರಿಗೆ ಬಾಗಿಲನ್ನು ಮಲಗುವ ತನಕ ತೆರೆದೇ ಇಡಬೇಕು. ಸಂಜೆ ಲಕ್ಷ್ಮಿ ಆಗಮಿಸುವ ಹೊತ್ತು ಎಂದು ತೆರೆದಿಟ್ಟ ಬಾಗಿಲಿನ ಉಪಯೋಗವನ್ನು ಸೊಳ್ಳೆಗಳು ಚೆನ್ನಾಗಿ ಬಳಸುವವು. ಯೂರೋಪಿನ ದೇಶಗಳಲ್ಲಿ ಮನೆಬಾಗಿಲು ಸದಾ ಮುಚ್ಚಿರುತ್ತದೆ. ನಾನು–ಬಾನು ಅಮೆರಿಕೆಯಲ್ಲಿ ತುಸು ಕಾಲವಿದ್ದೆವು. ಕರ್ಫ್ಯೂ ಹೊಡೆಸಿಕೊಂಡಿರುತ್ತಿದ್ದ



ಬೀದಿಗಳಿಂದ ಉಸಿರುಗಟ್ಟಿತು. ಪಾಶ್ಚಿಮಾತ್ಯ ಸಿನಿಮಾಗಳನ್ನು ಗಮನಿಸಿ. ಬಾಗಿಲು ಮುಚ್ಚುವ ಸೀನುಗಳೇ ಅರ್ಧಭಾಗ ತುಂಬಿರುತ್ತವೆ. 'ಬೇಬಿಸ್ ಡೇಔಟ್'ನ ಕೊನೆಯ ದೃಶ್ಯವಂತೂ ನನಗೆ ಆಘಾತ ಕೊಟ್ಟಿತು. ಆಕಸ್ಮಿಕವಾಗಿ ಕಳೆದುಹೋದ ಮಗುವನ್ನು ದಿನವೆಲ್ಲ ತಲ್ಲಣದಲ್ಲಿ ಹುಡುಕುವ ದಂಪತಿಗಳು, ಅದು ಸಿಕ್ಕಮೇಲೆ ಅದನ್ನೊಂದು ಕೋಣೆಯಲ್ಲಿ ಮಲಗಿಸಿ ಬಾಗಿಲು ಎಳೆದುಕೊಳ್ಳುತ್ತಾರೆ. ಸಿನಿಮಾ ಮುಗಿಯುತ್ತದೆ. ಆ ರಾತ್ರಿಯಾದರೂ ಜತೆಯಲ್ಲಿ ಮಲಗಿಸಿಕೊಳ್ಳಬೇಕಿತ್ತು ಅಲ್ಲವೇ? ಅಲ್ಲಿನ ಬಾಗಿಲು ಸದಾ ಬಾಗಿಲು ಮುಚ್ಚುವುದಕ್ಕೆ ಕಾರಣ ಚಳಿಯೊ, ಸಾರ್ವಜನಿಕದಿಂದ ದೂರವಾಗಿ ಖಾಸಗಿತನ ಕಾದುಕೊಳ್ಳುವುದೊ? ಕಾರಣವೇನೇ ಇರಲಿ, ಮಹಿಳೆಯರನ್ನು ಆಚೆ ಹೋಗದಂತೆ ಬಾಗಿಲು ಹಾಕುವ ಸಂಸ್ಕೃತಿಗಿಂತ ಖಾಸಗಿತನಕ್ಕೆ ಬಾಗಿಲು ಮುಚ್ಚಿಕೊಳ್ಳುವ ಸಂಸ್ಕೃತಿ ಲೇಸು.

ಮನೆಬಾಗಿಲನ್ನು ತೆರೆಯಲು ಮುಚ್ಚಲು ಶಿಷ್ಟಾಚಾರಗಳಿವೆ. ನಂಟರನ್ನು ಬೀಳ್ಕೊಡುವಾಗ ಅವರು ಕಣ್ಮರೆಯಾಗುವ ತನಕ ಬಾಗಿಲು ಹಾಕಬಾರದಂತೆ. ದಢಾರನೆ ಮುಚ್ಚಿದರೆ ಬೇರೆಯೇ ಸಂದೇಶ ರವಾನೆಯಾಗುವುದು. ಬೇಡದ ಅತಿಥಿಗಳು ವಾರಗಟ್ಟಲೆ ಬಿಡಾರ ಬಿಟ್ಟರೆ, ಮನೆಯವರಾದರೂ ಏನು ಮಾಡಬೇಕು? ಒಬ್ಬ ಗೃಹಿಣಿ ದಾಸರನ್ನು ಕಂಡು ಆಗಷ್ಟೆ ಬಾಗಿಲು



**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಹಾಕಿರಬೇಕು. ಅಲ್ಲಾಡುವ ಚಿಲಕ ಕಂಡು ದಾಸರು ಊಹಿಸಿ 'ಚಿಲಕವಲ್ಲಾಡುತಿದೆ' ಎಂದು ಹಾಡಿದರು. ಪ್ರತಿಮನೆಯ ಬಾಗಿಲಿಗೆ ಹೋಗಿ ಕಾದು ಭಿಕ್ಷೆ ಎತ್ತುವವರಿಗೆ ಇರುವ ದ್ವಾರಜ್ಞಾನ ಯಾರಿಗೂ ಇಲ್ಲ. ದೇವರ ದರ್ಶನಕ್ಕಾಗಿ ಗುಡಿಬಾಗಿಲ ಮುಂದೆ ನಿಂತ ಭಕ್ತರಿಗಿಂತ ಪ್ರೇಮಿಯ ದರ್ಶನಕ್ಕಾಗಿ ಬಾಗಿಲ ಮುಂದೆ ನಿಂತವರ ಸಂಖ್ಯೆ ಹೆಚ್ಚಿದೆ. ನಾನು ನೋಡಿದ ಒಂದು ಸಿನಿಮಾದಲ್ಲಿ, ಒಬ್ಬ ಹುಡುಗಿ ತಾನು ಪ್ರೇಮಿಸಿದ ಹುಡುಗನನ್ನು ಪೋಷಕರು ಒಪ್ಪುವುದಿಲ್ಲ. ಆಕೆ ಅಳುತ್ತ ತನ್ನ ಕೋಣೆಗೆ ಓಡಿಹೋಗಿ ದಢಾರೆಂದು ಬಾಗಿಲು ಹಾಕಿಕೊಳ್ಳುವಳು. ಏನಾದರೂ ಮಾಡಿಕೊಂಡಾಳೆಂದು ಅಪ್ಪ ಅಮ್ಮ ದಢದಢ ಬಾಗಿಲು ಬಡಿಯುವರು–ಬೇಟಿ, ದರವಾಜಾ ಖೋಲ್. ಆಕೆ ಎಷ್ಟೊ ಹೊತ್ತಿನ ಬಳಿಕ ತೆರೆಯುವಳು. ಫ್ಯಾನಿಗೆ ನೇತಾಡುವ ದೃಶ್ಯವನ್ನು ನಿರೀಕ್ಷಿಸುತ್ತಿದ್ದ ಪ್ರೇಕ್ಷಕರಿಗೆ ನಿರಾಶೆ ಆಗುವಂತೆ, ಪ್ರಿಯತಮನ ಪಟದ ಜತೆ ತಣ್ಣಗೆ ಕುಳಿತಿರುವಳು. ಬಾಗಿಲನ್ನು ಪ್ರವೇಶಿಸುವ ನಿರ್ಗಮಿಸುವ ವಿಶಿಷ್ಟ ಕ್ರಮಗಳೂ ಇವೆ. ಗುಡಿಯ ದರ್ಗಾದ ಬಾಗಿಲನ್ನು ಪ್ರವೇಶಿಸುವಾಗ ಅವುಗಳ ಹೊಸಲಿಗೆ ನಮಸ್ಕರಿಸುವ ಬರುವಾಗ ಹಿಮ್ಮುಖವಾಗಿ ದಾಟುವ ಪದ್ಧತಿಯಿದೆ. ಜೀವನದಲ್ಲಿ ಎಂದೂ ಗುಡಿಗೆ ಹೋಗದ ಕುವೆಂಪು, ಶಿಲ್ಪಕಲೆಯ ಗುಡಿಯನ್ನು ನೋಡಲು 'ಬಾಗಿಲೊಳು ಕೈಮುಗಿದು ಒಳಗೆ ಬಾ' ಎಂದು ಸೂಚಿಸಿದರು. ಬಾಗಿಲು ಪ್ರವೇಶಿಗರಿಂದ ತಾಳ್ಮೆ ನಮ್ರತೆ ಬೇಡುತ್ತದೆ. ಎದೆಕದ ತೆಗೆಯದೆ ಪ್ರೀತಿ ಹರಿಸಲಾಗದು. ಪ್ರಾಣಪುರುಷ ತಾಳ್ಮೆಯಿಂದ ಕಾಯದಿದ್ದರೆ ರತಿಕವಾಟವೂ ದ್ರವಿಸದು.

ಹಳ್ಳಿಯಲ್ಲಿದ್ದ ನಮ್ಮ ಮನೆಯ ದಪ್ಪನೆಯ ಬಾಗಿಲು, ತೆರೆವಾಗ ಮುಚ್ಚುವಾಗ ಭಯಂಕರ ಸದ್ದು ಮಾಡುತ್ತಿತ್ತು. ನನ್ನ ಕೀಲುಗಳಿಗೆ ಎಣ್ಣೆ ಕುಡಿಸಿರೊ ಎಂದು ಬೀದಿಯನ್ನೇ ಎಬ್ಬಿಸುವಂತೆ ಆರ್ತನಾದ. ಕಳ್ಳ ತೆರೆದು ಬರುವ ಸಾಧ್ಯತೆಯೇ ಇರಲಿಲ್ಲ. ಈಗಿರುವ ಮನೆಯ ಗೇಟ್ಬಾಗಿಲು ಕೂಡ ಸೈರನ್ನಿನಂತೆ ಬಂದವರ ಸೂಚನೆ ಕೊಡುತ್ತಿದೆ. ನನ್ನ ಪ್ರಕಾರ ಬಂದವರು ಬಾಗಿಲಗಂಟೆ ಬಾರಿಸಬೇಕು. ಕದವನ್ನು ದಢದಢ ಬಡಿಯುವವರನ್ನು ಕಂಡರೆ ನನಗಾಗದು. ತಟ್ಟಿದರೆ ತಬಲಾದ ಮೇಲೆ ಮೃದುಬೆರಳು ಆಡಿದಾಗ ಹುಟ್ಟುವ ಮಧುರನಾದ ಕೇಳಿಸಬೇಕು. ನಾದದ ಆಧಾರದ ಮೇಲೆ ಅತಿಥಿ ಅಭ್ಯಾಗತರ ಸೂಕ್ಷ್ಮತೆ ಅಳೆಯಬಹುದು. ಹೋಟೆಲುಗಳಲ್ಲಿ ಪ್ಲೀಸ್ ಡೋಂಟ್ ಡಿಸ್ಟರ್ಬ್ ಎಂದು ನವವಿವಾಹಿತರು ತಂಗಿರುವ ಕೋಣೆಗಳ ಬಾಗಿಲಿಗೆ ಸೂಚನ ಫಲಕ ಸಿಕ್ಕಿಸುವುದುಂಟು. ಗಾಯಕಿ ಅನ್ನಪೂರ್ಣದೇವಿಯವರು ರವಿಶಂಕರರ ವಿಚ್ಛೇದನದ ಬಳಿಕ ಒಂಟಿಯಾಗಿ ಬದುಕಿದರು. ತಮ್ಮ ಬಾಗಿಲ ಮೇಲೆ 'ಕರೆಗಂಟೆ ಒತ್ತಿ. ಪ್ರತಿಕ್ರಿಯೆ ಬಾರದಿದ್ದಲ್ಲಿ ನಿಮ್ಮ ಸಂದೇಶ ಬಿಟ್ಟುಹೋಗಿ' ಎಂದು ಬರೆಸಿದ್ದರು. ಆದರೆ ಈ ಸೂಕ್ಷ್ಮವನ್ನು ವಿದ್ಯುತ್ ಅಂಚೆ ಕೊರಿಯರ್ ಇಲಾಖೆಯವರಿಗೆ ಕಲಿಸಲು ಸಾಧ್ಯವಿಲ್ಲ. ಕೆಲವರಂತೂ ಕಳ್ಳರ ಮನೆಯನ್ನು ರೈಡ್ ಮಾಡಲು ಬಂದ ಪೋಲಿಸರಂತೆ ಬಡಿಯುತ್ತಾರೆ. ಕದ ತಟ್ಟುವುದಕ್ಕೆ ಬಹಳ ಅರ್ಥಗಳಿವೆ. ನೊಂದವರು ನ್ಯಾಯಾಲಯದ ಕದ ತಟ್ಟುವಾಗ ಶಬ್ದ ಬಾರದೆ ಇರಬಹುದು. ಆದರೆ ನೋವು ಕಾಣುತ್ತದೆ. ಕೆಲವು ಕದಗಳನ್ನು ನಾವಾಗೇ ತಟ್ಟಲಾಗದು. ಬೇರೆ ಯಾರೊ ತಟ್ಟುವುದನ್ನೂ ಬಯಸಲಾಗದು. ಉದಾ. ಸಾವು ಮತ್ತು ಯುದ್ಧ. ಬಳೆಗಾರ ಚನ್ನಯ್ಯ ಬಾಗಿಲಿಗೆ ಬಂದಿಹೆನು, ಒಳಬರಲಪ್ಪಣೆಯೇ?

ನಾನು ಪ್ರವಾಸ ಹೋದಾಗ ಕೋಟೆ ಅರಮನೆಗಳ ಬಾಗಿಲುಗಳನ್ನು ಗಮನಿಸುತ್ತೇನೆ. ಭಾರತದಲ್ಲೇ ಎತ್ತರವಾದ ಬಾಗಿಲುಳ್ಳ ಫತೇಪುರ್ ಸಿಕ್ರಿಯ ಬುಲಂದ್ ದರವಾಜಾ ನೆನಪಾಗುತ್ತದೆ. ಆದರೆ ಅಕಬರನ ಶಯ್ಯಾಗೃಹಕ್ಕೆ ಕದಗಳೇ ಇರಲಿಲ್ಲ. ಗೈಡಿಗೆ ಕಾರಣ ಕೇಳಿದೆ. 'ಆಕ್ರಮಣವಾದರೆ ತಪ್ಪಿಸಿಕೊಳ್ಳಲೆಂದೇ ಪರದೆ ಬಾಗಿಲುಗಳಿದ್ದವು' ಎಂದ. ಆದರೂ ಬಾಗಿಲಿಲ್ಲದ ಕೋಣೆಯಲ್ಲಿ ದೊರೆ ರಾಣಿಯೊಂದಿಗೆ ಏಕಾಂತದಲ್ಲಿ ಇರುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಯಿತು. ಕರ್ನಾಟಕದಲ್ಲಿ ಬಾಗಿಲಿಲ್ಲದ ಮನೆಗಳ ಒಂದು ಊರಿದೆ. ಕಳ್ಳರಿಗೊಡ್ಡಿದ ಸವಾಲಿನಂತಿರುವ ಅದನ್ನು ನೋಡಲು ಹೋಗಿದ್ದೆ. ಸಂತನು ಮನೆಯ ರಕ್ಷಣೆ ಮಾಡುವನು ಎಂದು ಜನರಿಗೆ ನಂಬಿಕೆಯಿತ್ತು. ಆದರೆ ಸಂತನೂ ನಿದ್ದೆಯಲ್ಲಿ ಮೈಮರೆತಾಗ ಕಳ್ಳರು ಮಹಿಮೆ ತೋರಬಾರದು ಎಂದಿಲ್ಲವಲ್ಲ. ಅದಕ್ಕಾಗಿ ರೊಕ್ಕ ಒಡವೆಗಳನ್ನು ತಿಜೋರಿಯಲ್ಲಿ ಭದ್ರವಾಗಿಟ್ಟು ಬಾಗಿಲು ಹಾಕಿದ್ದರು.

ಬಾಯಿ ಇಲ್ ಶಬ್ದಗಳಿಂದ ಬಾಗಿಲು. ಮನೆಗೆ ಬಾಯಿಯೇ ಬಾಗಿಲು. ಮನೆಯ ರೂಪ ಹೇಗೂ ಇರಲಿ, ಅದರ ಬಾಗಿಲೊಳಗೆ ಹೊಕ್ಕಾಡುತ್ತ ನಮ್ಮ ಆಯಸ್ಸು ಕಳೆಯುತ್ತದೆ. ನಮ್ಮ ಬಾಳಿನ ವಿವಿಧ ಅವಸ್ಥೆಗಳಿಗೆ ಅದು ಸಾಕ್ಷಿಯಾಗುತ್ತದೆ. ತಾಯಹೊಟ್ಟೆಯಿಂದ ಹುಟ್ಟಿದ ನಾವು ಮಣ್ಣಬಾಗಿಲ ಮೂಲಕ ನಿರ್ಗಮಿಸುತ್ತೇವೆ. ಸ್ವರ್ಗವೊ ನರಕವೊ ಇದೆಯೆಂದು ನಂಬುವವರಿಗೆ, ಕೊನೆಯ ಬಾಗಿಲ ಬಳಿಕ ಹೊಸ ಮನೆಯ ಭರವಸೆಯಿದೆ. ಆದರೆ ಕಾಣದ ಕಡಲಿದೆ ಎಂದು ಭಾವಿಸಿದವರಿಗೆ? ಕೊನೆಗೂ ಉಳಿವ ಸತ್ಯವೆಂದರೆ, ವಾಸಿಸುವ ಮನೆಯದಲ್ಲ. ಅವುಗಳ ಬಾಗಿಲ ಮೂಲಕ ಮಾಡುವ ಆಗಮನ–ನಿರ್ಗಮನಗಳದ್ದು. ಬೇಂದ್ರೆಯವರಂತೂ ಮೂಡಣ ಮನೆಯ ಬಾಗಿಲ ತೆರೆದು ಬೆಳಕನ್ನು ಹರಿಸಿ ಜಗವೆಲ್ಲ ತೊಯ್ಯಿಸುವ ಸೂರ್ಯನನ್ನು ಬಣ್ಣಿಸಿ, ಬಾಗಿಲ ಅರ್ಥವನ್ನೇ ವಿಸ್ತರಿಸಿದರು. ಇದೇ ಬೇಂದ್ರೆ ಹಗಲಿನಲ್ಲಿ ಕಾಣಿಸಿಕೊಳ್ಳುವ ಚಂದ್ರನ ಹೆಣವನ್ನೂ ಚಿತ್ರಿಸಿದರು. ನಿಜ, ಸೂರ್ಯನಿರುವ ಕಾಲದಲ್ಲಿ ಚಂದ್ರ ಬರಬಾರದು. ಆದರೆ ಅವನು ಬೀರುವ ಬೆಳಕಾದರೂ ಸೂರ್ಯನಿಂದ ಕಡ ತೆಗೆದುಕೊಂಡಿದ್ದು. ಪರಸ್ಪರ ಗೆಳೆಯರೂ ಹಗೆಗಳೂ ಆದ ಆಗಸ ಕಾಯಗಳಿವು. ಜನ, ಬಾಗಿಲ ಚೌಕಟ್ಟಿನ ಮೇಲೆ ಮುಳುಗುವ ಮೂಡುವ, ಕತ್ತಲು ಬೆಳಕಿನ ಆಟವಾಡುವ ಸೂರ್ಯಚಂದ್ರರನ್ನು ಕೆತ್ತಿಸುವುದು ಸುಮ್ಮನೆ ಅಲ್ಲ.

## ಕವಿ ಮನಸು

### ಕಡಲ ತೀರದ ಬೀಸುವ ಗಾಳಿ



ದಡದಲ್ಲಿರುವವರಿಗೆ ಮನಸ್ಸಿಗೆ
ಮುದಕೊಡುವ ತಂಗಾಳಿ.
ಅಲೆ ಅಲೆಗಳು ಮೇಲೆ ಏಳಿ
ನಿಧಾನವಾಗಿ ಉಗ್ರ ರೂಪ ತಾಳಿ.
ಬೀಸುತಿದೆ ಮನದಲ್ಲಿ ಭಯದ ಬಿರುಗಾಳಿ.
ರಾಕ್ಷಸ ಅಲೆಗಳು ಮಾಡಿತಿದ್ದೆ
ಮೀನುಗಾರರ
ಪುಟ್ಟ ದೋಣಿಗಳ ಮೇಲೆ ದಾಳಿ.
ತಂಗಾಳಿಯೇ ಇರಲಿ,
ಬಿರುಸಾದ ಬಿರುಗಾಳಿಯೇ ಬರಲಿ,
ಹುಟ್ಟು ಹಾಕಿ ಸೇರಬೇಕಿದೆ ದಡವ
ತುಂಬ ಬೇಕಿದೆ ಉದರ ಜೋಳಿಗೆ ಅವ.
ಒಮ್ಮೆ ಶಾಂತವಾದ ಪ್ರೀತಿಯ ಕಡಲತೀರ
ಇನ್ನೊಮ್ಮೆ ಭಯಪಡಿಸಿ ನೋವಿಸುವ ಶರ.

**– ಮಂಜುಶ್ರೀ ಮುರಳೀಧರ್.**
ತೋರಣಗಲ್ಲು, ಬಳ್ಳಾರಿ.

### ಮಲ್ಲಿಗೆ ಮಾಲೆ



ಗಿಡದಲಿ ಅರಳಿದೆ ಘಮಘಮ ಮಲ್ಲಿಗೆ
ಮುಡಿಯುವ ಕಾತರ ನೋಡಿದ ನಾರಿಗೆ
ಮಿಡಿದಿದೆ ಹೃದಯವು ಹೂವಿನ ಚೆಲುವಿಗೆ
ಜಡವನು ತೋರದೆ ಬಂದಳು ಸನಿಹಕೆ

ಬಿಡುವಳೆ ಹೂಗಳು ಕಂಡರೆ ಕಣ್ಣಿಗೆ
ತಡವನು ಮಾಡದೆ ಕಿತ್ತಳು ಮೆಲ್ಲಗೆ
ಬಿಡದಲೆ ಹೂಗಳ ತುಂಬುತ ಬೊಗಸೆಗೆ
ನಡೆದಳು ಮನೆಯೆಡೆ ಸಂತಸ ಮನಸಿಗೆ

ತುಡಿತವು ತುಂಬಿದೆ ಮುಡಿಯಲು
ತುರುಬಿಗೆ
ಹಿಡಿದಳು ದಾರವ ಮಾಡುವ ಮಾಲೆಗೆ
ಗಡಿಬಿಡಿ ಇಲ್ಲದೆ ಹೆಣೆದಳು ಚಂದದೆ
ಜಡೆಯಲಿ ಇರಿಸುತ ಮನವದು ಹಿಗ್ಗಿದೆ

ಕಂಪನು ಸೂಸುವ ಮಾಲೆಯು ಶಿರದಲಿ
ಇಂಪಿನ ರಾಗವ ಹಾಡುತ ಮನದಲಿ
ಕೆಂಪಿನ ಕೆನ್ನೆಯು ಇನಿಯನ ತೋಳಲಿ
ಕಂಪನಗೊಂಡಳು ಸರಸದ ನೆನಪಲಿ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

## ತುಂಗಭದ್ರಾ ನೀರಿನ ಮಟ್ಟ



| ಗುರುವಾರ: 08–02–2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.06 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 177 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.484 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1613.71 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9398 ಕ್ಯುಸೆಕ್ |
| ಸಾಮರ್ಥ್ಯ | 45.428 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# 6 ದಿನಗಳ ತರಬೇತಿಗೆ ಚಾಲನೆ

## ಐಟಿಐ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮ

■ **ಹಂಪಿ ಟೈಮ್ಸ್ ರಾಯಚೂರು**

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಫೆ.07ರಿಂದ ಫೆ.12ರವರೆಗೆ ಸರ್ಕಾರಿ ಐಟಿಐ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 6 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಫೆ.7ರ(ಬುಧವಾರ) ನಗರದ ಸರ್ಕಾರಿ ಐಟಿಐನಲ್ಲಿ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ವಿಜಯಶಂಕರ ಮಾತನಾಡಿ, ಜಗತ್ತಿನಲ್ಲಿ ಪ್ರಮುಖ ಉದ್ಯಮಿದಾರರು ತಮ್ಮ ಉದ್ಯಮದಿಂದ ಸಾಕಷ್ಟು ಯಶಸ್ಸನ್ನು ಕಂಡುಕೊಂಡಿದ್ದಾರೆ.



ಉತ್ತಮ ಉದ್ಯಮಗಳ ಅವಕಾಶಗಳನ್ನು ಗುರುತಿಸಿ ಕಾರ್ಯರೂಪಕ್ಕೆ ತರುವುದರಿಂದ ಯಶಸ್ವಿ ಉದ್ಯಮಿಗಳಾಗಬಹುದು ತಿಳಿಸಿದರು.

ಇದೇ ವೇಳೆ ಸಿಡಾಕ್‌ನ ಜಂಟಿ ನಿರ್ದೇಶಕ ಜಿ.ಯು.ಹುಡೇದ ಮಾತನಾಡಿ, 6 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಉದ್ಯಮಶೀಲತೆಯ ಮಹತ್ವ, ಉದ್ಯಮಶೀಲತೆಯ ಗುಣಲಕ್ಷಣಗಳು, ಸಾಧನಾ ಪ್ರೇರಣಾ ತರಬೇತಿ, ಯೋಜನೆಗಳ ಆಯ್ಕೆ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಕ್ಷೇತ್ರ ಭೇಟಿ, ಉತ್ಪನ್ನಗಳ ಬೆಲೆ ನಿರ್ಧರಿಸುವದು, ಉದ್ಯಮಗಳ ನಿರ್ವಹಣೆ ಹಾಗೂ ಬ್ಯಾಂಕ್ ಸೌಲತ್ತುಗಳು ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಸರ್ಕಾರದ ಸಹಾಯಧನ ಸೌಲಭ್ಯ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ ಅನುಭವಿ ಉಪನ್ಯಾಸಕರುಗಳಿಂದ ಮಾಹಿತಿ ನೀಡಲಾಗುವದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಭೀಮಣ್ಣಅವರು ವಹಿಸಿದ್ದರು. ಸಮಾರಂಭದಲ್ಲಿ ಅತಿಥಿಗಳಾಗಿ ಯಶಸ್ವಿ ಉದ್ಯಮಶೀಲರಾದ ಸಂದೀಪ ಗುನ್ನಳ್ಳಿ ಅವರಿಗೆ ಸನ್ಮಾನಿಸಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಆರ್.ವಿ ಕಾಂತನನವರ, ಬಜಾರಪ್ಪ, ಮೌನೇಶ, ಕಿರಿಯ ತರಬೇತಿ ಅಧಿಕಾರಿ ಸದಾಶಿವಪ್ಪ, ಸಿಡಾಕ್ ತರಬೇತುದಾರ ನಾಗರಾಜ.ಕೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಿಲ್ಲಾಡಳಿತ ವಿ.ಸಿ ಮೂಲಕ ಸಿಎಂ ಜನಸ್ಪಂದನದಲ್ಲಿ ಭಾಗಿ




■ **ಹಂಪಿ ಟೈಮ್ಸ್ ರಾಯಚೂರು**

ರಾಜ್ಯದ ಮುಖ್ಯಮಂತ್ರಿಗಳಿಂದ ಬೆಂಗಳೂರಿನ ವಿಧಾನ ಸೌಧದಲ್ಲಿ ಫೆ.8ರಂದು ಹಮ್ಮಿಕೊಂಡಿದ್ದ ಜನಸ್ಪಂದನ ಕಾರ್ಯಕ್ರಮದ ಅಂಗವಾಗಿ ಜನರು ಸಲ್ಲಿಸುವ ಅಹವಾಲುಗಳ ಕುರಿತು ಸೂಕ್ತ ಪರಿಹಾರೋಪಾಯಗಳನ್ನು ಒದಗಿಸುವ ನಿಟ್ಟಿನಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿಯ ವಿಡಿಯೋ ಸಂವಾದದ ಕೊಠಡಿಯಲ್ಲಿ ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ ನಾಯಕ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್.ಬಿ ಅವರು ವಿಡಿಯೋ ಸಂವಾದದ ಮೂಲಕ ಕಾರ್ಯಕ್ರಮದಲ್ಲಿ ಹಾಜರಾದರು.

# ಫೆ.12ಕ್ಕೆ ಕಾಯಕ ಶರಣರ ಜಯಂತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಕಾಯಕ ಶರಣರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ದೂಳಯ್ಯ, ಉರಿಲಿಂಗ ಪೆದ್ದಿ ಅವರ ನೆನಪಿನ ಅಂಗವಾಗಿ ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ಫೆ.12 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಯುವ ಸಬಲೀಕರಣ, ಕ್ರೀಡಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ಉದ್ಘಾಟನೆ ಮಾಡುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗು ಶಾಸಕ ಜೆ.ಎನ್ ಗಣೇಶ್, ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಬಿ.ಎಂ ನಾಗರಾಜ್, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾ ಪೌರರಾದ ಬಿ.ಶ್ವೇತ ಅವರು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಾಹಿತಿಗಳಾದ ಎನ್.ಡಿ.ವೆಂಕಮ್ಮ ಮತ್ತು ನಿವೃತ್ತ ಉಪನ್ಯಾಸಕರಾದ ಸುಶೀಲ ಅವರಿಂದ ವಿಶೇಷ ಉಪನ್ಯಾಸ ಇರಲಿದೆ.

ಬಳ್ಳಾರಿಯ ಎರ್ರೆಗೌಡ ಕೆ.ಆರ್ ಅವರಿಂದ ವಚನ ಗಾಯನ ಆಯೋಜಿಸಿಲಾಗಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್, ಮಹಾನಗರ ಪಾಲಿಕೆ ಆಯುಕ್ತರಾದ ಜಿ.ಖಲೀಲ್ ಸಾಬ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ನಾಗರಾಜ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಮೈಕ್ರೋ ನ್ಯೂಸ್

## ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ, ಚಿತ್ರಕಲಾ ಸ್ಪರ್ಧೆ

**ಹಂಪಿ ಟೈಮ್ಸ್ ರಾಯಚೂರು**

ಪ್ರಾದೇಶಿಕ ಸಾರಿಗೆ ಇಲಾಖೆ ರಾಯಚೂರು ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ–2024 ಅಂಗವಾಗಿ ಸರ್ಕಾರಿ ಆದರ್ಶ ವಿದ್ಯಾಲಯ ಯರಮರಸ್‌ನಲ್ಲಿ ಫೆ.7ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಮತ್ತು ಎನ್.ಎಸ್.ಎಸ್. ಶಾಲಾ ಘಟಕದ ಸಂಯುಕ್ತಾಶ್ರಯದಲ್ಲಿ ಪ್ರಬಂಧ ಸ್ಪರ್ಧೆ ಮತ್ತು ಚಿತ್ರ ಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಯಿತು.

ಪ್ರಾದೇಶಿಕ ಸಾರಿಗೆ ಅಧಿಕಾರಿ ವಿನಯಾ ಕಾಟೋಕರ್ ರವರ ಎಲ್ಲಾ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತಾ ಕುರಿತು ತಿಳುವಳಿಕೆ ನೀಡಿದರು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಕರ ಪತ್ರ ಹಂಚಿದರು. ರಸ್ತೆ ಸುರಕ್ಷತೆ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ದೇ ಮತ್ತು ಚಿತ್ರಕಲಾ ಸ್ಪದೇ ಏರ್ಪಡಿಸಲಾಯಿತು.

ಪ್ರಬಂಧ ಸ್ಪರ್ದೆಯಲ್ಲಿ ಪ್ರಥಮ ಬಹುಮಾನ ಕು. ಅಚಲ ರಾಂಪುರೆ , ದ್ವಿತಿಯ ಬಹುಮಾನ ಕು.ಭಾಗ್ಯಶ್ರೀ, ತೃತಿಯ ಬಹುಮಾನ ಕು.ಸಾನ್ವಿ ಚಿತ್ರಕಲಾ ಸ್ಪರ್ದೆಯಲ್ಲಿ ಪ್ರಥಮ ಬಹುಮಾನ ಕು.ಅಖಿಲ ಎಂ.ಎಸ್. ದ್ವಿತಿಯ ಬಹುಮಾನ ಕು. ಕೀರ್ತಿ ತೃತಿಯ ಬಹುಮಾನ ಕು.ಅರುಣಾ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯಗುರು ಮಹಬೂಬ್ ಅಲಿ, ದೈಹಿಕ ಶಿಕ್ಷಕ ಪ್ರವೀಣ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಸಿಬ್ಬಂದಿಗಳಾದ ಸೈಯದ್ ಸಾಜೀದ್ ಹುಸೇನ್, ಪ್ರ.ದ.ಸ, ದ್ವಿದಸ ಶಿವಶಂಕರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಫೆ.೦೯ ರಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ–1ರ ವ್ಯಾಪ್ತಿಗೆ ಬರುವ 110/11ಕೆ.ವಿ ಸೌತ್ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್–47 ಫೀಡರ್ ನ ವಿದ್ಯುತ್ ಪರಿವರ್ತಕ ಸ್ಥಳಾಂತರ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಫೆ.09 ರಂದು ಬೆಳಿಗ್ಗೆ 10 ರಿಂದ ಸಂಜೆ 05 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸಹಾಯಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳಿವು:** ಅಂದ್ರಾಳ್ ರಸ್ತೆ, ಕೊಲಮಿ ಚೌಕ್, ಮಿಲ್ಲರ ಪೇಟೆ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದುತಿಳಿಸಿದ್ದಾರೆ.

## ತಿಂಗಳೊಳಗೆ ಅರ್ಜಿಗಳ ವಿಲೇವಾರಿ ಮಾಡುವ ಕೆಲಸವಾಗಲಿ: ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಕೊಪ್ಪಳ**

ವಿಧಾನ ಸೌಧದ ಮುಂಭಾಗದಿಂದ ಸಿಎಂ ಸಿದ್ದರಾಮಯ್ಯ ಅವರು ರಾಜ್ಯ ಮಟ್ಟದ ಜನತಾ ದರ್ಶನದ 2ನೇ ಕಾರ್ಯಕ್ರಮವನ್ನು ಗುರುವಾರ ಹಮ್ಮಿಕೊಂಡಿದ್ದರು.

ಇದೆ ವೇಳೆ ಮಾತನಾಡಿದ ಮುಖ್ಯಮಂತ್ರಿಗಳು, ಇಂದಿನ ಜನತಾ ದರ್ಶನದಲ್ಲಿ ಸುಮಾರು 20 ಸಾವಿರ ಜನರು ಭಾಗವಹಿಸಿದ್ದು, ತಮ್ಮ ಅಹವಾಲುಗಳನ್ನು ನೀಡಿದ್ದಾರೆ. ಸುಮಾರು 11 ಸಾವಿರ ಅರ್ಜಿಗಳು ಸ್ವೀಕೃತವಾಗಿವೆ. ಇದರಲ್ಲಿ ಹೆಚ್ಚಾಗಿ ಕಂದಾಯ ಇಲಾಖೆಗೆ ಸೇರಿದ ಅರ್ಜಿಗಳಾಗಿವೆ. ಕೆಲವು ಅರ್ಜಿಗಳಿಗೆ ಸ್ಥಳದಲ್ಲಿಯೇ ಇತ್ಯರ್ಥ ಪಡಿಸಿ, ಆದೇಶಗಳನ್ನು ನೀಡಿದ್ದೇವೆ. ಜಿಲ್ಲೆಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಆಯಾ ಜಿಲ್ಲಾಧಿಕಾರಿಗಳಿಗೆ, ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದೆ. ಕೂಡಲೇ ಜನರ ಸಮಸ್ಯೆಗಳ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಬೇಕು. ತ್ವರಿತವಾಗಿ ಇತ್ಯರ್ಥ ಪಡಿಸಬಹುದಾದ ಅರ್ಜಿಗಳನ್ನು ಕೂಡಲೇ ಇತ್ಯರ್ಥ ಪಡಿಸಬೇಕು ಹಾಗೂ ಕಾನೂನಿಗೆ ವಿರುದ್ಧವಾದ ಅರ್ಜಿಗಳಿಗೆ ಸೂಕ್ತ ಹಿಂಬರಹ ನೀಡಬೇಕು ಎಂದು ಸೂಚನೆ ನೀಡಿದರು.

# ಮಹನೀಯರ ಜಯಂತಿ ಆಚರಣೆ ಸಭೆ

■ **ಹಂಪಿ ಟೈಮ್ಸ್ ಕೂಡ್ಲಿಗಿ**



ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಎಂ.ರೇಣುಕಾ ಅಧ್ಯಕ್ಷತೆಯಲ್ಲಿ ಗುರುವಾರ ಕಾಯಕ ಶರಣರ, ಸವಿತಾ ಮಹರ್ಷಿ ಹಾಗೂ ಸಂತ ಸೇವಾಲಾಲ್ ಜಯಂತಿಗಳ ಪೂರ್ವಭಾವಿ ಸಭೆ ನಡೆಯಿತು. ಈ ಸಂಧರ್ಭದಲ್ಲಿ ತಹಸೀಲ್ದಾರ್ ಎಂ.ರೇಣುಕಾ ಮಾತನಾಡಿ, ಶರಣರ ಹಾಗೂ ಸಂತರ ತತ್ವಾದರ್ಶಗಳನ್ನ ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸಿ ಅವರ ಸತ್ಯ ಪಥದಲ್ಲಿ ನಾವುಗಳು ಸಾಗಿ ಸಮ ಸಮಾಜದ ನಿರ್ಮಾತೃಗಳಾಗಬೇಕು ಎಂದು ಸರ್ಕಾರ ಇಂಥಹ ಮಹನೀಯರ ಜಯಂತಿಗಳನ್ನ ಆಚರಿಸಲು ಮುಂದಾಗಿದೆ.

ಆಯಾ ಸಮಾಜದ ಬಾಂಧವರೊಂದಿಗೆ ತಾಲೂಕು ಕಚೇರಿಯಲ್ಲಿ ಸರಳವಾಗಿ ಆಚರಿಸಲು ನಿರ್ಧರಿಸಿದ್ದು, ಕಾಯಕ ಶರಣರ ಜಯಂತಿ ಇದೇ 10 ರಂದು, 15 ರಂದು ಸಂತ ಸೇವಲಾಲ್ ಜಯಂತಿ ಹಾಗೂ 16 ರಂದು ಸವಿತಾ ಮಹರ್ಷಿಗಳ ಜಯಂತಿ ಆಚರಣೆ ಹಮ್ಮಿಕೊಳ್ಳಲಾಗವುದು.

ಆಯಾ ಜಯಂತಿ ದಿನದಂದು ಸಮಾಜದ ಬಾಂಧವರ ಸೇರಿದಂತೆ ಸಾರ್ವಜನಿಕರು ಆಗಮಿಸಿ ಜಯಂತಿ ಯಶಸ್ವಿಗೊಳಿಸಲು ತಿಳಿಸಿದರು. ಅದರಂತೆ ಆಯಾ ಜಯಂತಿಗಳ ದಿನದಂದು ಶಾಲಾ,ಕಾಲೇಜು,ಸ್ಥಳೀಯ ಆಡಳಿತ ಸೇರಿದಂತೆ ತಾಲೂಕಿನ ಎಲ್ಲಾ ಕಚೇರಿಗಳಲ್ಲಿ ಈ ಮೇಲಿನ ಎಲ್ಲಾ ಮಹನೀಯರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಜೀವನ ಕುರಿತು ಮಾತನಾಡಲಾಗುವುದು. ಅವರತ ತತ್ವಾದರ್ಶಗಳನ್ನ ನಾವುಗಳು ಪಾಲಿಸಬೇಕಾಗಿದೆ ಎಂದು ತಿಳಿಸಿದರು. ಯಾವುದೇ ಇಲಾಕೆ ಅಥಾವ ಶಾಲಾ,ಕಾಲೇಜುಗಳಲ್ಲಿ ಜಯಂತಿ ಆಚರಣೆ ಮಾಡದ ಕುರಿತು ದೂರುಗಳು ಬಂದಲ್ಲಿ ನೇರವಾಗಿ ಸರ್ಕಾರಕ್ಕೆ ಬರೆಯುವುದಾಗಿ ತಹಸೀಲ್ದಾರ್ ಎಂ. ರೇಣುಕಾ ಎಚ್ಚರಿಕೆ ನೀಡಿದರು. ಮುಖಂಡರಾದ ಹಿರೇಕುಂಬಳಗುಂಟೆ ಉಮೇಶ್, ಕರವೇ ಅಧ್ಯಕ್ಷ ಕಾಟೇರ ಹಾಲೇಶ್, ಪಪಂ ಸದಸ್ಯರಾದ ಸಿರಬಿ ಮಂಜುನಾಥ, ಬಾಸೂ ನಾಯ್ಕ್, ಪೂರ್ಯಾ ನಾಯ್ಕ್, ಪವಿತ್ರ, ವೆಂಕಟೇಶ ನಾಯ್ಕ್, ಬಾಲಾಜಿ ನಾಯ್ಕ್, ಸವಿತಾ ಸಮಾಜದ ನಾಗರಾಜ್, ಪರಶುರಾಮ, ಪವನ್ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

# ಸಂವಿಧಾನ ಮೌಲ್ಯಗಳ ಸ್ಮರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**



ಜಿಲ್ಲೆಯಲ್ಲಿ "ಸಂವಿಧಾನ ಜಾಗೃತಿ ಜಾಥಾ" ಸಂಚಾರ ಮುಂದುವರೆದ ಹಿನ್ನಲೆಯಲ್ಲಿ ಬುಧವಾರ ಸಿರುಗುಪ್ಪ ತಾಲ್ಲೂಕಿನ ಕೆಂಚನಗುಡ್ಡ, ನಡಿವಿ, ಎಂ.ಸೂಗೂರು, ಮುದ್ದಟನೂರು ಹಾಗೂ ಸಿರಿಗೇರಿ ಗ್ರಾಮಗಳ ಗ್ರಾಮ ಪಂಚಾಯಿತಿಗಳ ಮಾರ್ಗದಲ್ಲಿ ಸಂಚರಿಸಿತು.

ಕೆಂಚನಗುಡ್ಡ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಲಂಬಾಣಿ ನೃತ್ಯದ ಮೂಲಕ ಹಾಗೂ ಗ್ರಾಮಸ್ಥರು ಪಟಾಕಿಗಳನ್ನು ಸಿಡಿಸುವ ಮೂಲಕ ಜಾಥಾವನ್ನು ಸ್ವಾಗತಿಸಿದ್ದು ವಿಶೇಷವಾಗಿತ್ತು. ಗ್ರಾಮ ಪಂಚಾಯಿತಿಯ ವತಿಯಿಂದ ಬಲೂನುಗಳನ್ನು ಹಾರಿಸಲಾಯಿತು. ಮಾರ್ಗದಲ್ಲಿ ಹೆರಕಲ್ಲು, ನಿಟ್ಟೂರು ಹಾಗೂ ಉಡೇಗೋಳ ಗ್ರಾಮಗಳಲ್ಲಿ ಜಾಥಾವನ್ನು ಸ್ವಾಗತಿಸಿ ಡಾ.ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆಗೆ ಪೂಜೆ ಸಲ್ಲಿಸಲಾಯಿತು.

ನಡಿವಿ ಗ್ರಾಮದಲ್ಲಿ ಜಾಥಾಗೆ ವಿಶೇಷವಾಗಿ ಎತ್ತಿನ ಬಂಡಿಗಳು, ಪೂರ್ಣ ಕುಂಭ ಹಾಗೂ ಕಳಶ ಹಿಡಿದ ಮಹಿಳೆಯರು ಸ್ವಾಗತಿಸಿದರು. ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ವಿದ್ಯಾರ್ಥಿನಿಯರು ಲೇಜಿಮ್ ಹಾಗೂ ಡೊಳ್ಳು ಬಾರಿಸುವ ಮೂಲಕ ಜನ ಮನ ಸೆಳೆಯುವ ಪ್ರದರ್ಶನ ನೀಡಿದರು. ಮೊರಾರ್ಜಿ ದೇಸಾಯಿ ಶಾಲೆಯ ವಿದ್ಯಾರ್ಥಿನಿಯರು ಸೈನಿಕರ ವೇಷದಲ್ಲಿ ಅತ್ಯುತ್ತಮವಾಗಿ ಪಥ ಸಂಚಲನ ಮಾಡಿದರು.

ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಸಂವಿಧಾನ ರಚನಾ ಸಭೆ ಹಾಗೂ ಸಂವಿಧಾನ ಕುರಿತ ವೀಡಿಯೋ ತುಣುಕುಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಯಿತು. ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿ ಜಾಥಾದ ಉದ್ದಕ್ಕೂ ಸಂವಿಧಾನ ಪ್ರಸ್ತಾವನೆಯ ಪ್ರತಿಗಳನ್ನು ಹಂಚಿಕೆ ಮಾಡಲಾಯಿತು.

ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು, ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿವಿಧ ಇಲಾಖೆಗಳ ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯಿತಿಗಳ ಜನಪ್ರತಿನಿಧಿಗಳು, ಕಳಶ ಹಿಡಿದ ಹಾಗೂ ಪೂರ್ಣ ಕುಂಭ ಹೊತ್ತ ಮಹಿಳೆಯರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು

# ಸಿಲೆಂಡರ್‌ಗೆ ಹೆಚ್ಚುವರಿ ಶುಲ್ಕ ನೀಡಬೇಕಾಗಿಲ್ಲ

■ **ಹಂಪಿ ಟೈಮ್ಸ್ ರಾಯಚೂರು**

ಫೆಬ್ರವರಿ–2024ರ ಮಾಹೆಯಲ್ಲಿ ಅಡುಗೆ ಅನಿಲದ ಸಿಲಿಂಡರನ್ನು ಮನೆಗೆ ಸರಬರಾಜು ಮಾಡುವ ಡೆಲಿವರಿ ಹುಡುಗರಿಗೆ ಗ್ರಾಹಕರು ಡೆಲಿವರಿಗೆ ಶುಲ್ಕ ನೀಡುವ ಅಗತ್ಯವಿಲ್ಲ, ಬಿಲ್ಲಿನಲ್ಲಿ ನಮೂದಿಸಿರುವ ಮೊತ್ತವನ್ನು ಮಾತ್ರ ನೀಡುವಂತೆ ತಿಳಿಸಿದೆ. ಗ್ಯಾಸ್ ಏಜೆನ್ಸಿಗಳು ಗೃಹ ಬಳಿಕೆಯ ಅನಿಲ ಸಿಲಿಂಡರನ್ನು ನೇರವಾಗಿ ಗೋದಾಮಿನಿಂದ ಗ್ರಾಹಕರಿಗೆ ಸರಬರಾಜು ಮಾಡತಕ್ಕದ್ದು. ಯಾವುದೇ ಕಾರಣಕ್ಕಾಗಿಯೂ ಅನಿಲ ಸಿಲಿಂಡರನ್ನು ರಸ್ತೆ ಬದಿಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಮೈದಾನಗಳಲ್ಲಿ ಇಟ್ಟು ಮಾರಾಟ ಮಾಡತಕ್ಕದ್ದಲ್ಲ. ಸಿಲಿಂಡರನ್ನು ಮನೆಗೆ ತಲುಪಿಸುವ ಸಂದರ್ಭದಲ್ಲಿ ಯಾವುದೇ ಡೆಲಿವರಿ ಹುಡುಗ ಬಿಲ್ಲಿನಲ್ಲಿ ನಮೂದಿಸಿದ ಮೊತ್ತಕ್ಕಿಂತ ಹೆಚ್ಚಿನ ಹಣ ಕೇಳಿದಲ್ಲಿ, ಉಪ ನಿರ್ದೇಶಕರ ಕಛೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ರಾಯಚೂರು ಕಾರ್ಯಾಲಯಕ್ಕೆ ಹಾಗೂ ಕಛೇರಿಯ ದೂರವಾಣಿ ಸಂಖ್ಯೆ 08532–236178 ಮತ್ತು ತಹಶೀಲ್ದಾರ ಕಛೇರಿಯ ಆಹಾರ ಶಾಖೆಗೆ ದೂರು ಸಲಿಸಬಹುದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಫೆ.19ರಂದು ಛತ್ರಪತಿ ಶಿವಾಜಿ ಮಹರಾಜ ಜಯಂತಿ : ಸಿದ್ಧತೆಗೆ ಸೂಚನೆ

■ **ಹಂಪಿ ಟೈಮ್ಸ್ ಕೊಪ್ಪಳ**

ಫೆ. 19ರಂದು ಆಚರಿಸಲ್ಪಡುವ ಛತ್ರಪತಿ ಶಿವಾಜಿ ಮಹರಾಜ ಜಯಂತಿಗೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಉಪ ವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಫೆಬ್ರವರಿ 8ರಂದು ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಯಂತಿ ದಿನದಂದು ಎಲ್ಲಾ ಕಚೇರಿಗಳಲ್ಲಿ ಹಾಗೂ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಛತ್ರಪತಿ ಶಿವಾಜಿ ಮಹರಾಜರ ಜಯಂತಿಯನ್ನು ಕಡ್ಡಾಯವಾಗಿ ಆಚರಿಸುವಂತೆ ಶಾಲಾ ಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಸಮಾಜದ ಮುಖಂಡರು ಮಾತನಾಡಿ, ಈ ಬಾರಿಯ ಛತ್ರಪತಿ ಶಿವಾಜಿ ಮಹರಾಜ ಜಯಂತಿಯನ್ನು ಸರಳವಾಗಿ ಆಚರಿಸಲು ನಿರ್ಧರಿಸಿದ್ದು, ಜಿಲ್ಲಾಡಳಿತ ಭವನದಲ್ಲಿ ಪೂಜಾ ಕಾರ್ಯಕ್ರಮಕ್ಕೆ ಅನುಕೂಲ ಮಾಡಿಕೊಡಬೇಕು. ಜಯಂತಿ ದಿನದಂದು ನಗರದ ಶಿವಾಜಿ ಸರ್ಕಲ್ ಬಳಿ ಸಮಾಜದ ವತಿಯಿಂದ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಹಾಗೂ ಅಕ್ಕಮಹಾದೇವಿ ದೇವಸ್ಥಾನದಲ್ಲಿ ನಡೆಯುವ ಕೋಟೆ ರಸ್ತೆಯ ಪ್ರಸಾದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸ್ವಚ್ಛತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಉಪ ವಿಭಾಗಾಧಿಕಾರಿಗಳು, ಜಯಂತಿ ದಿನದಂದು ಛತ್ರಪತಿ ಶಿವಾಜಿ ಮಹರಾಜರ ವೃತ್ತ ಹಾಗೂ ಅಕ್ಕಮಹಾದೇವಿ ಹತ್ತಿರ ಸ್ವಚ್ಛತೆಗೆ ನಗರಸಭೆಯಿಂದ ಸೂಕ್ತ ಕ್ರಮ ವಹಿಸಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ, ಸಮಾಜದ ಮುಖಂಡರಾದ ನಾಗೇಶ ರಾವ್ ಬಡಿಗೇರ್, ಮಾರುತಿ ಕಾರಟಗಿ, ಚಂದ್ರಶೇಖರ್ ಬಡಿಗೇರ್, ಈಶಪ್ಪ ಅರಿಕೇರಿ, ಉಮೇಶ ಸುರ್ವೆ, ರಮೇಶ ಗೋರ್ಪಡೆ, ಬಸವರಾಜ ಕಂಪ್ಲಿ, ಮಾರುತಿ ಆಪ್ಟೆ ಸೇರಿದಂತೆ ಹಲವು ಗಣ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸರ್ವಜ್ಞ ಜಯಂತಿಗೆ ಅಗತ್ಯ ಸಿದ್ಧತೆ ಕೈಗೊಳ್ಳಿ: ಕ್ಯಾ. ಮಹೇಶ್ ಮಾಲಗಿತ್ತಿ

■ **ಹಂಪಿ ಟೈಮ್ಸ್ ಕೊಪ್ಪಳ**

ತ್ರಿಪದಿ ಕವಿ ಸರ್ವಜ್ಞರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಉಪ ವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸರ್ವಜ್ಞ ಜಯಂತಿ ಆಚರಿಸುವ ಕುರಿತಂತೆ ಚರ್ಚಿಸಲು ಉಪ ವಿಭಾಗಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಫೆಬ್ರವರಿ 8ರಂದು ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತದಿಂದ ಸರ್ವಜ್ಞ ಜಯಂತಿಯನ್ನು ಫೆಬ್ರವರಿ 24ರಂದು ಜಿಲ್ಲಾ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದು, ವೇದಿಕೆ ಕಾರ್ಯಕ್ರಮ, ವಿಶೇಷ ಉಪನ್ಯಾಸ ನಡೆಯಲಿವೆ. ಶಿಷ್ಠಾಚಾರದಂತೆ ಕಾರ್ಯಕ್ರಮ ಆಯೋಜನೆ, ಆಮಂತ್ರಣ ಪತ್ರಿಕೆ, ವೇದಿಕೆ ಬ್ಯಾನರ್, ಭಾವಚಿತ್ರ, ಹೂವಿನ ಹಾರ, ಪೂಜಾ ಸಾಮಾಗ್ರಿಗಳ ವ್ಯವಸ್ಥೆ ಜೊತೆಗೆ ಮೆರವಣಿಗೆ ಸಂಬಂಧಿಸಿದಂತೆ ಅಗತ್ಯ ವ್ಯವಸ್ಥೆ ಒದಗಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜಯಂತಿ ದಿನದಂದು ಎಲ್ಲಾ ಕಚೇರಿಗಳಲ್ಲಿ ಹಾಗೂ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸರ್ವಜ್ಞರ ಜಯಂತಿಯನ್ನು ಕಡ್ಡಾಯವಾಗಿ ಆಚರಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಸರ್ವಜ್ಞರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಸಮಾಜದ ಎಲ್ಲಾ ಮುಖಂಡರು ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಹೇಳಿದರು. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ ಅವರು ಸಭೆಗೆ ವಿವರಿಸಿದರು. ಸಭೆಯಲ್ಲಿ ಸಮಾಜದ ಮುಖಂಡರಾದ ಕಳಕಪ್ಪ ಕುಂಬಾರ, ಅಶೋಕ ಕುಂಬಾರ, ಮಲ್ಲಪ್ಪ ಕುಂಬಾರ, ಮಲ್ಲಪ್ಪ ಮುದ್ದಾಬಳ್ಳಿ, ಸುರೇಶ ಕುಂಬಾರ, ಗವಿಸಿದ್ದಪ್ಪ ಬಂಡಿಮ್ಯಾಗಳ, ಪಲ್ಲಣ್ಣ ಕುಂಬಾರ, ಅಂದಪ್ಪ ಕುಂಬಾರ ಸೇರಿದಂತೆ ಇತರರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಿಮ್ಮ ಹಂಪಿ ಪ್ರವಾಸ ಅನುಭವ
ನೀವು ಹಂಪಿಗೆ ಭೇಟಿ ನೀಡಿದ್ದೀರಾ? ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ, ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ? ನಿಮ್ಮದೆ ಅಭಿಪ್ರಾಯಗಳನ್ನು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಿರಿ.
ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.
www.hampitimes.com
epaper.hampitimes.com
hampitimes@gmail.com
@hampitimes
9448633038

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
ಬಂಬೂ ಬಜಾರ್, ವಾಲ್ಮೀಕಿ ಸರ್ಕಲ್ ಹತ್ತಿರ, ಹೊಸಪೇಟೆ
9448633038, Email:hampitimes@gmail.com

**ಶ್ರೀ ದುರ್ಗಾಂಬೆ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ,**
ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಸಹಾಯಕ ನಿರ್ದೇಶಕರು, ಹೊಸಪೇಟೆ.

### ಪತ್ರಿಕಾ ಪ್ರಕಟಣೆ

ಶ್ರೀ ದುರ್ಗಾಂಬೆ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರ ಸಾಮಾನ್ಯ ಚುನಾವಣೆ ಜರುಗಿಸಲು ವೇಳಾಪಟ್ಟಿ ಪ್ರಕಟಿಸಲಾಗಿದ್ದು, ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: 16.02.2024 ಮಧ್ಯಾಹ್ನ 3–00 ಗಂಟೆಯವರೆಗೆ ದಿನಾಂಕ: 17.02.2024 ರಂದು ನಾಮಪತ್ರಗಳ ಪರಿಶೀಲನೆ ಹಾಗೂ ದಿನಾಂಕ: 18–02–2024 ರಂದು ಮಧ್ಯಾಹ್ನ 3–00 ಗಂಟೆಯವರೆಗೆ ನಾಮಪತ್ರ ವಾಪಸು ಪಡೆಯಲು ಕೊನೆಯ ದಿನವಾಗಿರುತ್ತದೆ. ಮತದಾನ ಅವಶ್ಯವಾದಲ್ಲಿ ದಿನಾಂಕ: 24–02–2024 ರಂದು ಸಹಕಾರಿಯ ಕಛೇರಿಯಲ್ಲಿ ಮತದಾನ ನಡೆಯಲಿದ್ದು, ಸಹಕಾರಿಯ ಸದಸ್ಯರುಗಳಿಗೆ ಚುನಾವಣಾ ವೇಳಾಪಟ್ಟಿಯನ್ನು ಕಳುಹಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಬಹುದಾಗಿದೆಯೆಂದು ಪ್ರಕಟಣೆಯ ಮೂಲಕ ತಿಳಿಸಿದೆ.

**ದಿನಾಂಕ: 07.02.2024**
**ಸ್ಥಳ: ಹೊಸಪೇಟೆ**

ಸಹಿ/– (ರಹಮತ್ ಅಲಿ) ರಿಟರ್ನಿಂಗ್ ಅಧಿಕಾರಿ
ಶ್ರೀ ದುರ್ಗಾಂಬೆ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ, ಹಾಗೂ ಸಹಾಯಕ ನಿರ್ದೇಶಕರು. ಸ.ನಿ.(ಕ), ಹೊಸಪೇಟೆ.

**IN THE COURT OF THE ADDL. CIVIL JUDGE AND JMFC AT HOSAPETE**
**Cri M.C.No. 7/ 2024**

S.R. Swaminathan ..Petitioner
Versus
Commissioner cum Registrar birth and death CMC Hosapete ...Respondent

**To, Whom so ever it may concern,**

WHEREAS the above name S.R. Swaminathan son of Ramaswamy aged about 77 years Hindu residing at 14th ward Dress camp T.B. Dam Hosapete Hosapete taluk filed the above petition under section 13(3) of birth and death registration Act for obtaining death certificate his brother S.R. Perumal son of Ramaswamy who expired on 08.11.1996 at 14th ward Dress camp T.B. Dam Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 2nd March 2024 at 11.00 'O' clock in the noon, to answer the petition as on the day fixed, otherwise the petition will be disposed in your absence.

Given under my hand and the seal of the Court, this 8th day of Feb 2024.

By order of the court
CHIEF MINISTERIAL OFFICER
ADDL CIVIL JUDGE AND JMFC COURT HOSAPETE

L.S. Ananda, Advocate, Hosapete

**IN THE COURT OF THE ADDL. CIVIL JUDGE AND JMFC AT HOSAPETE**
**Cri M.C.No. 6/ 2024**

S.R. Swaminathan ..Petitioner
Versus
Commissioner cum Registrar birth and death CMC Hosapete ...Respondent

**To, Whom so ever it may concern,**

WHEREAS the above name S.R. Swaminathan son of Ramaswamy aged about 77 years Hindu residing at 14th ward Dress camp T.B. Dam Hosapete Hosapete taluk filed the above petition under section 13(3) of birth and death registration Act for obtaining death certificate his Mother S.R. Valliyamma W/o Ramaswamy who expired on 10.02.1991 at 14th ward Dress camp T.B. Dam Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 2nd March 2024 at 11.00 'O' clock in the noon, to answer the petition as on the day fixed, otherwise the petition will be disposed in your absence.

Given under my hand and the seal of the Court, this 8th day of Feb 2024.

By order of the court
CHIEF MINISTERIAL OFFICER
ADDL CIVIL JU¬DGE AND JMFC COURT HOSAPETE

L.S. Ananda, Advocate, Hosapete

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA